Marta Jakimowicz

ಮಾರ್ಥ ಯಾಕಿಮೋವಿಝ್



ಸಂಧ್ಯಾ ಅಣ್ಣಯ್ಯ

Sandhya Annaiah

ಮಾರ್ಥ ಯಾಕಿಮೋವಿಜ಼್
Marta Jakimowicz

ಸಂಧ್ಯಾ ಅಣ್ಣಯ್ಯ
Sandhya Annaiah

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

Marta Jakimowicz : A monograph on the Life & Works of Marta Jakimowicz (Kannada & English) by Sandhya Annaiah, Published by Indramma H.V. Registrar, Karnataka Lalithakala Academy, Kannada Bhavana, J.C. Road, Bangalore - 560 002.

First Impression : 2018

Price : Rs. 90.00
Pages : 32+8
Paper : 100gsm Glossy Art Paper
Book Size : Crown one fourth
Copies : 500

ISBN : 978-81-938383-2-7

ಪ್ರಕಾಶಕರು:
ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ

ಮುದ್ರಕರು:
ಮಯೂರ್ ಪ್ರಿಂಟ್ ಆ್ಯಡ್ಸ್
ಬೆಂಗಳೂರು. । ಮೊಬೈಲ್: 9845986569

ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಅನೇಕ ಪುಸ್ತಕಗಳು ಪ್ರಕಟವಾಗುತ್ತಿದೆ. ಪ್ರಸ್ತುತ ವ್ಯಕ್ತಿ ಪರಿಚಯದ (ಮೊನೊಗ್ರಾಫ್) ಸರಣಿಯಲ್ಲಿ ಕೇವಲ ಚಿತ್ರಕಲಾವಿದರನ್ನು ಕುರಿತಾದವುಗಳಲ್ಲದೆ, ವಿಮರ್ಶಕರು, ಕಲಾಸಂಸ್ಥಾಪಕರುಗಳು ಮತ್ತು ಕಲಾಶಿಕ್ಷಕರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಈ ವ್ಯಕ್ತಿಗಳು ಗುರುತರಹದ ಪಾತ್ರವಹಿಸುತ್ತಾರೆ. ಲೇಖಕರು ಎಲ್ಲಾ ವ್ಯಕ್ತಿಗಳನ್ನು ಆಳವಾಗಿ ಅಧ್ಯಯನ ಮಾಡಿ, ಅವರ ಕಲಾತ್ಮಕ ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಗಮನಿಸಿ ವಿಶ್ಲೇಷಿಸಿದ್ದಾರೆ. ಚಿತ್ರದ ನಿರ್ಮಾಣ ಎಷ್ಟು ಮುಖ್ಯವೋ ಅದರ ಸಂಚಲನವೂ ಅಷ್ಟೇ ಮುಖ್ಯವಾಗಿರುತ್ತದೆ.

ಯಾವ ನಾಡಿನ ಕಲೆಯ ಬಗ್ಗೆ ಮಾತು ಬರವಣಿಗೆ ಸಂವಾದಗಳ ಮೂಲಕ ಸಂವಹನ ಸಾಧ್ಯವಾಗುತ್ತದೋ ಆ ನಾಡಿನ ಕಲೆ ಮಾತ್ರ ಭವಿಷ್ಯದಲ್ಲಿ ಉಳಿದುಕೊಳ್ಳುವುದು ಸತ್ಯ. ಕರ್ನಾಟಕ ಲಲಿತಕಲಾ ಅಕಾಡೆಮಿಯು ನಿರಂತರವಾಗಿ ಈ ಕಾರ್ಯಕ್ರಮವನ್ನು ಮಾಡುತ್ತಾ ಬಂದಿರುತ್ತದೆ.

ಮಾರ್ಥಾಯಾಕಿಮೋವಿಜ್ ಒಬ್ಬ ಪೋಲೆಂಡಿನ ಮಹಿಳೆ ಕಲೆಯಲ್ಲಿ ವಿಶಿಷ್ಟ ಆಸಕ್ತಿಯುಳ್ಳವಳು, ವಾರ್ಸಾ ವಿಶ್ವವಿದ್ಯಾಲಯದಿಂದ ಇಂಡೋಲಜಿ ವಿಷಯದಲ್ಲಿ ಪದವಿ ಪಡೆದವರು. ದ್ವಿಭಾಷಾ ಲೇಖಕಿಯಾದ ಇವರು ಭಾರತಕ್ಕೆ ೧೯೭೩ ರಲ್ಲಿ ಬಂದು ಭಾರತೀಯರೆ ಆಗಿಬಿಟ್ಟಿದ್ದಾರೆ. ಕಲಾ ಇತಿಹಾಸ, ಸಂಸ್ಕೃತ ಎಲ್ಲವನ್ನು ಅಭ್ಯಸಿಸಿರುವ ಇವರು ಅನೇಕ ಲೇಖನಗಳು ಮತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಮಕಾಲೀನ ಕಲಾ ವಿಮರ್ಶೆ ಇವರಿಗೆ ಕರಗತ. ಆಧ್ಯಾತ್ಮಿಕ ವಿಷಯಗಳಲ್ಲಿಯೂ ಆಸಕ್ತಿ ವಹಿಸಿದ್ದ ಇವರು ಹಿಂದೂ ದೇವತೆಗಳಾದ ಶಿವ ಹಾಗೂ ಕೃಷ್ಣನ ಕುರಿತು ಎರಡು ಪುಸ್ತಕಗಳನ್ನು ಪೋಲಿಷ್ ಭಾಷೆಯಲ್ಲಿ ಪ್ರಕಟಿಸಿರುತ್ತಾರೆ.

ಟೈಮ್ಸ್ ಆಫ್ ಡೆಕ್ಕನ್, ದಿ ಹಿಂದೂ, ಡೆಕ್ಕನ್ ಹೆರಾಲ್ಡ್, ಪತ್ರಿಕೆಗಳಿಗೆ ಕಲಾವಿಮರ್ಶೆಯನ್ನು ಬರೆಯುತ್ತಿದ್ದರು. ಸಮಕಾಲೀನ ಕಲಾವಿದರುಗಳಿಗೆ ಉತ್ತೇಜನ ನೀಡಿ ರಾಷ್ಟ್ರಮಟ್ಟ ಮತ್ತು ಅಂತರ್‌ರಾಷ್ಟ್ರಮಟ್ಟಕ್ಕೆ ಏರಲು ಕಾರಣರಾದರು.

ಅನೇಕ ಗ್ಯಾಲರಿಗಳನ್ನು, ಮ್ಯೂಸಿಯಂಗಳನ್ನು ಕಂಡಿರುವ ಇವರು ಕಲೆಯ ವಿಮರ್ಶ ಲೇಖನಗಳು, ಕಲೆಯ ಬಗ್ಗೆ ಕಿರುಹೊತ್ತಿಗೆಗಳನ್ನು ಹೊರತಂದಿದ್ದಾರೆ.

ಈ ಪುಸ್ತಕದ ಲೇಖಕಿಯಾದ ಸಂಧ್ಯ ಅಣ್ಣಯ್ಯ ಅವರು ಬಹಳ ಸುಂದರವಾಗಿ ಮಾರ್ಥಾಯಾಕಿಮೋವಿಜ್ ಅವರ ಜೀವನ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ ಅವರಿಗೆ ಅಕಾಡೆಮಿಯ ಪರವಾಗಿ ಧನ್ಯವಾದಗಳು ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಮಯೂರ್ ಪ್ರಿಂಟ್ ಆ್ಯಡ್ಸ್ ಅವರಿಗೂ ಸಹ ವಂದನೆಗಳು ಹಾಗೂ ಪ್ರಕಾಶಕರಿಗೂ, ಸಂಪಾದಕ ಮಂಡಳಿಯವರಿಗೂ, ರಿಜಿಸ್ಟ್ರಾರ್ ಆದ ಇಂದ್ರಮ್ಮ.ಹೆಚ್.ವಿ. ಹಾಗೂ ಅಕಾಡೆಮಿ ಸಿಬ್ಬಂದಿಯವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಕಲಾವಿದರು, ಕಲಾರಸಿಕರು ಇದನ್ನು ತುಂಬು ಹೃದಯದಿಂದ ಸ್ವಾಗತಿಸುವರೆಂದು ಆಶಿಸುತ್ತೇನೆ.

ಪ್ರೊ. ಎಂ.ಜೆ. ಕಮಲಾಕ್ಷಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

ಪ್ರಕಾಶಕರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಸಕ್ತ ಸಾಲಿನಲ್ಲಿ ಹಿರಿಯ ಕಲಾವಿದರ ಸಾಧನೆ, ಜೀವನ ಮತ್ತು ಅವರ ಕೃತಿಗಳ ಕುರಿತಂತೆ ಪುಸ್ತಕಗಳನ್ನು ಹೊರತರುವ ಯೋಜನೆಯ ಹಮ್ಮಿಕೊಂಡಿದೆ. ಇದರಲ್ಲಿ ೧೯೭೩ರಲ್ಲಿ ಪೋಲೆಂಡಿನಿಂದ ಭಾರತಕ್ಕೆ ಬಂದ ಮಾರ್ಥಾ ಯಾಕಿಮೋವಿಜ್ ಬಂದು ಭಾರತೀಯರೆ ಆಗಿಬಿಟ್ಟಿದ್ದಾರೆ. ಕಲಾ ಇತಿಹಾಸ, ತತ್ವಶಾಸ್ತ್ರ, ಸಂಸ್ಕೃತ ಎಲ್ಲವನ್ನು ಅಭ್ಯಸಿಸಿರುವ ಇವರು ಅನೇಕ ಲೇಖನಗಳು ಮತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಮಕಾಲೀನ ಕಲಾ ವಿಮರ್ಶೆ ಇವರಿಗೆ ಕರಗತವಾಗಿತ್ತು. ಆಧ್ಯಾತ್ಮಿಕ ವಿಷಯಗಳಲ್ಲಿಯೂ ಆಸಕ್ತ ವಹಿಸಿದ್ದ ಇವರು ಹಿಂದೂ ದೇವತೆಗಳಾದ ಶಿವ ಹಾಗೂ ಕೃಷ್ಣನ ಕುರಿತು ಎರಡು ಪುಸ್ತಕಗಳನ್ನು ಪೋಲಿಷ್ ಭಾಷೆಯಲ್ಲಿ ಪ್ರಕಟಿಸಿರುತ್ತಾರೆ. ಜಯದೇವ ಕವಿಯ 'ಗೀತಗೋವಿಂದ'ವನ್ನು ಸಂಸ್ಕೃತದಿಂದ ಪೋಲಿಷ್ ಭಾಷೆಗೆ ಅನುವಾದ ಮಾಡಿದ್ದಾರೆ.

೧೯ನೇ ಹಾಗು ೨೦ನೇ ಶತಮಾನದ ಪೋಲೆಂಡಿನ ಕಲೆಯಲ್ಲದೇ, ಏಷಿಯಾದ ಕಲಾ ಪ್ರಕಾರಗಳಲ್ಲಿ ಕೂಡ ಇವರು ಪರಿಣಿತಿಯನ್ನು ಹೊಂದಿದ್ದರು. ಇಲ್ಲಿನ ಕಲಾ ಚಟುವಟಿಕೆಗಳು ಹಾಗು ಬರವಣಿಗೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವೃತ್ತ ಪತ್ರಿಕೆಗಳಲ್ಲಿ ಕಲಾ ವಿಮರ್ಶಕರಾಗಿ, ಕಲಾವಿದರ/ ಕಲಾ ಪ್ರದರ್ಶನದ ಕುರಿತು ಲೇಖನಗಳನ್ನು ರಚಿಸುತ್ತಾ, ಕಲಾವಿದರ ಕುರಿತಾದ ಏಕವ್ಯಕ್ತಿ ಚಿತ್ರಣಗಳನ್ನು ಬರೆಯುತ್ತಾ ಹಾಗೂ ಪ್ರಮುಖವಾಗಿ ಭಾರತೀಯ ಸಮಕಾಲೀನ ಕಲೆಯ ನಿರೂಪಕರಾಗಿ ದುಡಿಯುತ್ತಾ ಬೆಂಗಳೂರಿನಲ್ಲಿ ಮೂರು ದಶಕಗಳಿಗೂ ಹೆಚ್ಚಿನ ಸಮಯದಿಂದ ನೆಲೆಸಿದ್ದಾರೆ. ದ್ವಿ–ಭಾಷಾ ಲೇಖಕಿಯಾದ ಇವರು ಪೋಲಿಷ್ ಹಾಗು ಆಂಗ್ಲ ಭಾಷೆಯಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇಂತಹ ವಿಶೇಷ ಕಲಾವಿದರನ್ನು ಗುರುತಿಸಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ೨೦೧೬ರ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಪುಸ್ತಕದ ಲೇಖಕಿಯಾದ ಸಂಧ್ಯಾಅಣ್ಣಯ್ಯ ಅವರು ಬಹಳ ಸುಂದರವಾಗಿ ಮಾರ್ಥಾ ಯಾಕಿಮೋವಿಜ್ ಅವರ ಜೀವನ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ ಅವರಿಗೆ ಅಕಾಡೆಮಿಯ

ಪರವಾಗಿ ಧನ್ಯವಾದಗಳು. ಅದೇ ರೀತಿ ಈ ಪುಸ್ತಕದ ಮುದ್ರಣಕ್ಕೆ ಸೂಕ್ತ ಸಲಹೆ ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಜೆ.ಕಮಲಾಕ್ಷಿ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಪ್ರಕಟಣಾ ಸಲಹಾ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲೀಕರು, ಮಯೂರ ಪ್ರಿಂಟರ್ಸ್, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇಂದ್ರಮ್ಮ.ಹೆಚ್.ವಿ
ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ

ಲೇಖಕರ ನುಡಿ

ಮಾರ್ಥಾ ಯಾಕಿಮೋವಿಝ್‌ರವರ ಕುರಿತಾದ ಏಕವ್ಯಕ್ತಿ ಚಿತ್ರಣ ಬರೆಯುವುದಕ್ಕಾಗಿ ನನ್ನ ಹೆಸರು ಆಯ್ಕೆಯಾಗಿದೆ ಎಂದು ತಿಳಿದಾಗ, ನನಗೆ ಸಂತೋಷದೊಂದಿಗೆ ಕೊಂಚ ಹೆದರಿಕೆ ಕೂಡ ಆಗಿತ್ತು. ಅಂತಹ ಹಿರಿಯ ಲೇಖಕಿಯ ಕುರಿತಾಗಿ ಬರೆಯುವ ಅವಕಾಶವೇ ಈ ಎರಡೂ ಬಗೆಯ ಅನಿಸಿಕೆಗೆ ಕಾರಣವಾಗಿತ್ತು. ಮಾರ್ಥಾರವರ ಪರಿಚಯ ಬಹಳ ವರ್ಷಗಳಿಂದ ಇದ್ದರೂ ಆತ್ಮೀಯವೆನಿಸುವ ಒಡನಾಟವೇನೂ ಇರಲಿಲ್ಲ. ಇದಕ್ಕೆ ಕಾರಣ ಮಾರ್ಥಾರವರ ಗಂಭೀರವಾದ ವ್ಯಕ್ತಿತ್ವ. ಯಾವುದೇ ಪ್ರದರ್ಶನದ ವಿಮರ್ಶೆ ಮಾಡಲು ಬಂದಾಗಲೂ ಸಹ ಇತರೊಡನೆಗಿನ ಮಾತಿಗಿಂತ ಹೆಚ್ಚಾಗಿ ಅವರ ಗಮನವೆಲ್ಲಾ ಕಲಾಕೃತಿಗಳನ್ನು ನೋಡುವುದು ಹಾಗು ಅದರ ಕುರಿತಾದ ಟಿಪ್ಪಣಿಗಳನ್ನು ಮಾಡುವುದರಲ್ಲೇ ಇರುತ್ತಿತ್ತು. ಅವರ ಕುರಿತಾದ ಗೌರವ ಮಿಶ್ರಿತ ಅಂಜಿಕೆಯೊಂದಿಗೆ ನನ್ನ ಹಿಂಜರಿಕೆಯೂ ಸೇರಿ ಎಂದಿಗೂ ಅವರೊಂದಿಗೆ ಒಡನಾಟ ಬೆಳೆಸಿಕೊಳ್ಳುವ ಪ್ರಯತ್ನ ಮಾಡಿರಲೇ ಇಲ್ಲ.

ಆಹ್ವಾನ ದೊರೆತ ನಂತರ ಮೊದಲ ಬಾರಿಗೆ ಅವರಿಗೆ ಕರೆ ಮಾಡಿ ಈ ಪುಸ್ತಕದ ವಿಚಾರವನ್ನು ಹೇಳಿದಾಗಲೂ ಸಹ ಅವರು ತಾವು ಮಾಡಿರುವ ಸಾಧನೆ ಅಷ್ಟರಲ್ಲೇ ಇದೆ, ಈ ತರಹದ ತೋರಿಕೆ ತಮಗೆ ಇಷ್ಟವಿಲ್ಲ, ಬರುವುದು ಬೇಡವೆಂದು ಖಡಾಖಂಡಿತವಾಗಿ ನಿರಾಕರಿಸಿಬಿಟ್ಟರು. ಅಲ್ಲಿಗೇ ನನ್ನ ಲೇಖನದ ಭವಿಷ್ಯವನ್ನು ನೆನೆದು ಆತಂಕವಾಯಿತು. ಬಹಳಷ್ಟು ಮಾತಿನ ನಂತರ, ಅವರ ಮನ ಒಪ್ಪಿಸಿ, ಭೇಟಿಗೆ ದಿನ ನಿಗದಿ ಮಾಡಿದಾಗ ಒಂದು ದೊಡ್ಡ ಹಂತ ದಾಟಿದ ನೆಮ್ಮದಿ.

ಬೆಂಗಳೂರಿನ ಹೊರವಲಯದಂತಿರುವ ಚಿಕ್ಕ ಗುಬ್ಬಿಯ ಅವರ ಮನೆಯನ್ನು ತಲುಪಿದಾಗ, ಅವರ ಹಲವು ಸ್ನೇಹಿತರಂತೆ, ಎಲ್ಲೂ ಕಳೆದು ಹೋಗದೆ ನೇರವಾಗಿ ಬಹಳ ಸುಲಭವಾಗಿ ಅವರ ಮನೆ ತಲುಪಿದ್ದಕ್ಕೆ ಹೊಗಳುತ್ತಾ, ಪ್ರೀತಿ ಹಾಗು ಆದರದಿಂದ ಬರಮಾಡಿಕೊಂಡಾಗಲೇ ನನಗೆ, ಯಾವಾಗಲೂ ಕಠಿಣವಾಗಿ ಕಾಣುವ ಅವರ ಸ್ವಭಾವದ ಹಿಂದಿದ್ದ ಮೃದು ಸ್ವಭಾವದ ಪರಿಚಯವಾದದ್ದು. ಚಿಕ್ಕ ಗುಬ್ಬಿ ಕೆರೆಯ ಪಕ್ಕದಲ್ಲೇ ಇರುವ

ಇವರ ನಿವಾಸಕ್ಕೆ ತಲುಪಿದಾಗ ಸ್ವೇಚ್ಛವಾಗಿ ಬೆಳೆದಿದ್ದ ಹುಲ್ಲಾಗವಲಿಗೆ ಅಂಚಾಗಿ, ಅಷ್ಟೇ ಎಗ್ಗಿಲ್ಲದೆ ಬೆಳೆದಿದ್ದ ಗಿಡಮರಗಳನ್ನು ಹೊಂದಿದ ಹೂತೋಟವನ್ನು ದಾಟಿ ಹೋದಾಗ ಕಂಡದ್ದು ಅವರ ಮನೆ. ಅದರ ಪಕ್ಕದಲ್ಲೇ ಗಿಡ ಬಳ್ಳಿಗಳಿಂದ ಸಂಪೂರ್ಣವಾಗಿ ಮುಚ್ಚಿಹೋದ, ಅವರ ಮಗ ಕಲಾವಿದ ರವಿ ಷಾ ತನ್ನ ಕೈಯಾರ ಕಟ್ಟಿದ ಇನ್ನೊಂದು ಮನೆ. ಮನೆಯ ಒಳಗೆ ಕಾಲಿಡುತ್ತಿದ್ದ ಹಾಗೆ ಓಡಿ ಬಂದ ಅವರ ಸಾಕು ನಾಯಿ ಸೋಕ್ಸಿ. ಮನೆಯ ಒಳಗೆ ಹೊದರೆ, ಅದು ಅವರಷ್ಟೇ ಸರಳ. ಇಡೀ ಮನೆಯ ಆಕರ್ಷಣೆಯೆಂದರೆ ಅವರ ಅಡುಗೆಮನೆ ಹಾಗು ಅದರಲ್ಲಿ ಬಳಸಲಾಗಿರುವ ಬಿಳಿ ಹಾಗು ನೀಲಿ ಬಣ್ಣದ ಖುರ್ಜಾ ಹಾಸು ಹಾಗು ಅದೇ ಬಣ್ಣದ ಪಿಂಗಾಣಿಯ ಪಾತ್ರೆಗಳು.

ಮಾರ್ಥಾರವರ ಸಂದರ್ಶನ ಪ್ರಾರಂಭಿಸಿದಾಗ ಅವರಿಗೆ ತಮ್ಮ ಬರಹಗಾರ್ತಿಯ ಜೀವನದ ಕುರಿತು ಹೇಳುವಾಗ ಏನೋ ಹಿಂಜರಿಕೆ. ಮಾಡಿದ ಕೆಲಸದಲ್ಲಿ ಹೆಚ್ಚುಗಾರಿಕೆ ಏನಿದೆಯೆಂಬ ಅನಿಸಿಕೆ. ಅಷ್ಟು ವಿನಯ ಹಾಗು ಸಂಕೋಚದ ಸ್ವಭಾವ ಅವರದ್ದು. ಯಾವುದೇ ವಿಷಯವನ್ನು ಕೇಳಿದರೂ ಎಷ್ಟು ಬೇಕೋ ಅಷ್ಟೇ ಮಾತು, ನಂತರ ಮೌನ. ಅವರ ಖಾಸಗೀ ಜೀವನದ ಕುರಿತು ಅತಿ ಹೆಚ್ಚು ಮೌನ. ವೃತ್ತಿಯ ಕುರಿತು ಬರೆಯುವಾಗ ತಮ್ಮ ಜೀವನದ ವಿಷಯವೇಕೆ ಎಂಬ ಮರು ಪ್ರಶ್ನೆ. ಬಹಳವಾಗಿ ಕೋರಿಕೊಂಡ ನಂತರ ಹಂಚಿಕೊಂಡ ಖಾಸಗಿ ವಿಷಯಗಳು ಎಷ್ಟು ಬೇಕೋ ಅಷ್ಟು ಮಾತ್ರ.

ಇಷ್ಟು ವರ್ಷಗಳ ಕಾಲ ನಾನು ನೋಡಿದ ಮಾರ್ಥಾ ಒಬ್ಬರಾದರೆ, ಆತ್ಮೀಯತೆ ಬೆಳೆದ ನಂತರ ಕಂಡ ಮಾರ್ಥಾ ಬೇರೆಯ ತರಹವೇ ಕಂಡರು. ಕಠಿಣ ಕವಚವುಳ್ಳ ವ್ಯಕ್ತಿತ್ವದ ಹಿಂದೆ ಅಡಗಿದ್ದ ಪ್ರೀತಿ ವ್ಯಕ್ತ ಪಡಿಸಲು ಹೆಣಗುವ ಭಾವನಾಜೀವಿ ಕಂಡರು. ಭಾವನೆಗಳ ಏಳು ಬೀಳುಗಳನ್ನೇ ಕಂಡು, ಕ್ಲಿಷ್ಟವಾದ ವರ್ತನೆ ಬೆಳೆಸಿಕೊಂಡಿದ್ದ ಮಾರ್ಥಾ ಕಂಡರು. ನೀಡಿದ ಎರಡು ಮೂರು ಭೇಟಿಗಳಲ್ಲೇ ಅವರು ತೋರಿಸಿದ ವಿಶ್ವಾಸ, ಬೆಳೆದ ಆತ್ಮೀಯತೆ ಅತಿ ಆಳದ್ದು.

ಮೂವತ್ತು ವರ್ಷಗಳಿಂದ ಭಾರತದಲ್ಲೇ ನೆಲೆಸಿದ್ದರೂ, ಅವರು ಇಲ್ಲಿನ ಪೌರತ್ವವನ್ನು ಪಡೆದಿರಲಿಲ್ಲ. ವೀಸಾ ವಿಷಯದಿಂದ ಬಂದ ತೊಂದರೆಯಿಂದಾಗಿ, ತಮ್ಮ ವೃತ್ತಿಯನ್ನು ಮುಂದುವರಿಸಲು ಆಗಲಿಲ್ಲ. ಹಾಗಾಗಿ ಸುಮಾರು ಐದು ವರ್ಷಗಳಿಂದ ಅವರು ಯಾವುದೇ ಬರವಣಿಗೆಯನ್ನು ನಡೆಸಲಾಗದೇ ಒಂದು ದೊಡ್ಡ ಅಂತರ ಬೆಳೆದು ನಿಂತಿತ್ತು. ಇದು ಅವರನ್ನು ಬಹಳವಾಗಿ ಕಾಡುತ್ತಿತ್ತು. ಇದರೊಂದಿಗೆ ಅವರನ್ನು ಭೇಟಿ ಮಾಡಲು ಹೋದಾಗ, ಅವರು ತಮ್ಮ ಜೀವನದ ಒಂದು ಕಷ್ಟಕರವಾದ ಸಂದರ್ಭದಲ್ಲಿದ್ದರು. ಇದರೆಲ್ಲದರ ನಡುವೆಯೂ ಸಹ, ಅವರು ಸಂದರ್ಶನ ನೀಡಿ ಸಹಕರಿಸಿದ್ದರಿಂದ, ಇಂದು ಈ ಪುಸ್ತಕ ಹೊರಬರುತ್ತಿದೆ. ಇದಕ್ಕೆ ನಾನು ಮಾರ್ಥಾರವರಿಗೆ ಸದಾ ಆಭಾರಿಯಾಗಿರುತ್ತೇನೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿರುವ, ಕರ್ನಾಟಕದ ಕಲಾವಿದರುಗಳ ಕುರಿತಾಗಿ ಪ್ರಕಟವಾಗಿರುವ ಏಕವ್ಯಕ್ತಿ ಚಿತ್ರಣ ಪುಸ್ತಕಗಳು ಕಲಾ ವಲಯಕ್ಕೆ ನೀಡಿರುವ ಮಹತ್ತರವಾದ ಕೊಡುಗೆಯಾಗಿದೆ. ಈ ಪುಸ್ತಕಗಳು ಕರ್ನಾಟಕದ ಕಲಾವಿದರುಗಳು, ಅದರಲ್ಲೂ ಆಧುನಿಕ ಕಲಾವಿದರಗಳ ಕುರಿತಾದ ವ್ಯಾಪಕವಾದ ಮೂಲವಾಗಿ ಮಾರ್ಪಾಡಾಗಿದೆ. ಈ ಸರಣಿಯ ಪುಸ್ತಕವು ಮೊದಲನೆಯ ಬಾರಿಗೆ ಕಲಾ ವಿಮರ್ಶಕರೊಬ್ಬರ ಕುರಿತು ಪ್ರಕಟವಾಗುತ್ತಿದ್ದು, ಲೇಖಕಿ ಮಾರ್ಥಾ ಯಾಕಿಮೋವಿಚ್ ರವರ ಜೀವನ ಹಾಗು ಕೊಡುಗೆಯ ಕುರಿತಾಗಿದೆ. ಈ ಪುಸ್ತಕ ಸರಣಿಯ ಹಾಗೆ, ಮಾರ್ಥಾರವರ ಬರವಣಿಗೆಗಳೂ ಸಹ, ೭೦'ರ ದಶಕದಿಂದಾಚೆಗೆ ಬೆಂಗಳೂರಿನ ಕಲಾ ಪ್ರದರ್ಶನಗಳ, ಸಂಸ್ಕೃತಿಯ ಕುರಿತಾದ ಚಿತ್ರಣವನ್ನು ಕಟ್ಟಿಕೊಡುವ ಮಹತ್ತರವಾದ ಮೂಲವಾಗಿದೆ. ಇವರ ಬರವಣಿಗೆಗಳು ಕಲಾವಿದರುಗಳ ಹಾಗು ಧೋರಣೆಗಳ ವಿಕಸನವನ್ನು ದಾಖಲಿಸಿರುವ ಮೂಲವಾಗಿಯೂ ಸಹ ಇದೆ.

ನನ್ನ ಮೇಲೆ ನಂಬಿಕೆ ಇಟ್ಟು ಈ ಪುಸ್ತಕದ ಬರವಣಿಗೆಗೆ ಪ್ರೋತ್ಸಾಹಿಸಿ, ಉತ್ತೇಜಿಸಿದ ಗುರುಗಳಾದ ಎಚ್ ಎ. ಅನಿಲ್ ಕುಮಾರ್‌ರವರಿಗೆ ಮೊದಲ ಕೃತಜ್ಞತೆಗಳು. ಹಲವು ಬಾರಿ ಗಡುವನ್ನು ಮೀರಿದರೂ ಸಹ ಅವಧಿಯನ್ನು ವಿಸ್ತರಿಸಿ ಪುಸ್ತಕ ಮುಗಿಸಲು ಅನುವು ಮಾಡಿಕೊಟ್ಟ ಅಕಾಡೆಮಿಯ ಎಲ್ಲರಿಗೂ ನಾನು ಚಿರಋಣಿ. ನನ್ನ ಮೊದಲ ಪುಸ್ತಕದ ಬರುವಿಕೆಯನ್ನು ನನಗಿಂತ ಹೆಚ್ಚಾಗಿ ಕಾತುರದಿಂದ ಕಾಯುತ್ತಾ, ಅದಕ್ಕೆ ಬೇಕಾದ ಎಲ್ಲಾ ಪ್ರೋತ್ಸಾಹ ನೀಡುತ್ತಿದ್ದ, ಆದರೆ ಇದರ ಕೆಲಸಗಳು ಪೂರ್ಣಗೊಳಿಸುವ ಮುನ್ನ ಹಠಾತ್ತಾಗಿ ಈ ಜೀವನದ ಪಯಣವನ್ನೇ ಮುಗಿಸಿದ ನನ್ನ ಪ್ರೀತಿಯ ಬಾಳ ಸಂಗಾತಿಯಾಗಿದ್ದ ವಿಶಾಲ್‌ಗೆ ಈ ಪುಸ್ತಕ ಅರ್ಪಿಸುತ್ತೇನೆ.

ಕಲೆ ಹಾಗು ಕಲಾ ಬರವಣಿಗೆಗೆ ಮಾರ್ಥಾ ನೀಡಿರುವ ಕೊಡುಗೆಗೆ ನೀಡುವ ಸಮ್ಮಾನವು ದೀರ್ಘಕಾಲದಿಂದ ಬಾಕಿಇದ್ದು, ಈ ಪುಸ್ತಕವು ಆ ಉದ್ದೇಶವನ್ನು ಈಡೇರಿಸುವುದು ಎಂಬ ಆಶಯ.

– **ಸಂಧ್ಯಾ ಅಣ್ಣಯ್ಯ**

ಮಾರ್ತಾ ಯಾಕಿಮೋವಿಜ್

ಮೂಲತಃ ಪೋಲೆಂಡ್ ದೇಶದವರಾದ ಮಾರ್ತಾ ಯಾಕಿಮೋವಿಜ್‌ರವರು ವಾರ್ಸಾ ವಿಶ್ವವಿದ್ಯಾನಿಲಯದಿಂದ ಇಂಡೋಲಜಿ ವಿಷಯದಲ್ಲಿ ತಮ್ಮ ಪದವಿಯನ್ನು ಪಡೆದುಕೊಂಡು, ೧೯೭೩ರಲ್ಲಿ ಭಾರತಕ್ಕೆ ಬಂದು, ಇಲ್ಲಿನ ಕಲಾ ಚಟುವಟಿಕೆಗಳು ಹಾಗು ಬರವಣಿಗೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವೃತ್ತ ಪತ್ರಿಕೆಗಳಲ್ಲಿ ಕಲಾ ವಿಮರ್ಶಕರಾಗಿ, ಕಲಾವಿದರ/ ಕಲಾ ಪ್ರದರ್ಶನದ ಕುರಿತು ಲೇಖನಗಳನ್ನು ರಚಿಸುತ್ತಾ, ಕಲಾವಿದರ ಕುರಿತಾದ ಏಕವ್ಯಕ್ತಿ ಚಿತ್ರಣಗಳನ್ನು ಬರೆಯುತ್ತಾ ಹಾಗೂ ಪ್ರಮುಖವಾಗಿ ಭಾರತೀಯ ಸಮಕಾಲೀನ ಕಲೆಯ ನಿರೂಪಕರಾಗಿ ದುಡಿಯುತ್ತಾ ಬೆಂಗಳೂರಿನಲ್ಲಿ ಮೂರು ದಶಕಗಳಿಗೂ ಹೆಚ್ಚಿನ ಸಮಯದಿಂದ ನೆಲೆಸಿದ್ದಾರೆ. ದ್ವಿ-ಭಾಷಾ ಲೇಖಕಿಯಾದ ಇವರು ಪೋಲಿಷ್ ಹಾಗು ಆಂಗ್ಲ ಭಾಷೆಯಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಪರಿಚಯ:

ಮಾರ್ತಾ ಯಾಕಿಮೋವಿಜ್‌ರವರು ೧೯೪೮ರಲ್ಲಿ ಪೋಲೆಂಡ್ ದೇಶದ ವಾರ್ಸಾನಲ್ಲಿ ಜನಿಸಿದರು. ಇವರ ಪೋಷಕರು ಪೋಲೆಂಡ್ ದೇಶದವರೇ ಆದ ಆಂಡ್ರೆ ಹಾಗು ಇರೇನಾ ಯಾಕಿಮೋವಿಜ್. ಕಲಾ ಇತಿಹಾಸಕಾರರಾಗಿದ್ದ ಇವರಿಬ್ಬರೂ ಪೋಲೆಂಡಿನ ಕಲಾವಲಯಕ್ಕೆ ಗಮನಾರ್ಹವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ತಾಯಿ ಇರೇನಾ ಯಾಕಿಮೋವಿಜ್ ವಾರ್ಸಾದಲ್ಲಿರುವ ರಾಷ್ಟ್ರೀಯ ಸಂಗ್ರಹಾಲಯದ ಮುದ್ರಣಕಲೆ ಹಾಗು ಸಮಕಾಲೀನ ರೇಖಾ ಚಿತ್ರಗಳ ವಿಭಾಗದ ನಿರೂಪಕರಾಗಿ ೪೬ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಈ ವಿಭಾಗದ ಉಸ್ತುವಾರಿಯಲ್ಲಿದ್ದಾಗಲೇ ಪೋಲೆಂಡಿನ ಪಾಶ್ಚಾತ್ಯ ಆಧುನಿಕ ಕಲಾ ಸಂಧರ್ಭದ ಕಲಾವಿದರುಗಳ ಹಲವು ಏಕವ್ಯಕ್ತಿ ಕಲಾ ಪ್ರದರ್ಶನಗಳ ಆಯೋಜನೆಯಲ್ಲಿ ಇವರ ಮಹತ್ತರ ಪಾತ್ರವಿತ್ತು. ಇರೇನಾರವರು ನಿರೂಪಿಸಿದ ಪ್ರಮುಖವಾದ ಪ್ರದರ್ಶನ 'ಫೈವ್ ಸೆಂಚುರೀಸ್ ಆಫ್ ಪೋಲಿಷ್ ಗ್ರಾಫಿಕ್ ಆರ್ಟ್' ಪೋಲೆಂಡಿನ ಮುದ್ರಣ ಕಲೆ ನಡೆದುಬಂದ ಐದು ಶತಮಾನಗಳನ್ನು ಚಿತ್ರಿಸುವ ಕಲಾ ಪ್ರದರ್ಶನವಾಗಿತ್ತು. ಈ ಪ್ರದರ್ಶನದ ಜೊತೆಗೆ ಪ್ರಕಟಿಸಲಾದ ವಿವರವಾದ ಪುಸ್ತಕವು ಪೋಲೆಂಡಿನ ಮುದ್ರಣಕಲೆಯ ಮೊದಲ ಪಠ್ಯಪುಸ್ತಕವಾಗಿ ಗುರುತಿಸಿಕೊಂಡಿದೆ.

ಆಂಡ್ರೆ ಯಾಕಿಮೋವಿಜ್ ಪೋಲೆಂಡ್ ದೇಶದ ಪ್ರಮುಖವಾದ ಕಲಾ ಶಿಕ್ಷಣ ತಜ್ಞರಾಗಿದ್ದರು. ಅವರು ವಿದ್ಯಾರ್ಥಿ ದೆಸೆಯಿಂದಲೇ, ೨ನೇ ಮಹಾಯುದ್ಧದ ಸಮಯದ ಪೋಲೆಂಡಿನ ಪ್ರತಿರೋಧ ಚಳುವಳಿಯ ಭಾಗವಾಗಿದ್ದುಕೊಂಡು, ಚಳುವಳಿಯ ಪತ್ರಿಕೆಗಳಿಗೆ ಹಾಗು ಕರಪತ್ರಗಳಿಗೆ ಚಿತ್ರಗಳನ್ನು ರಚಿಸಿಕೊಡುತ್ತಿದ್ದರು. ಪೋಲೆಂಡಿನ ಪ್ರಸಿದ್ಧ ಲೇಖಕರು ಹಾಗು ಕವಿಗಳ ಪುಸ್ತಕಗಳ ಮುಖಪುಟವನ್ನು ಕೂಡ ಇವರು ಲಿನೋಕಟ್ ಮಾಧ್ಯಮದಲ್ಲಿ ರಚಿಸುತ್ತಿದ್ದರು. ಮಹಾಯುದ್ಧ ಮುಗಿದಮೇಲೆ ಇವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿ ನಂತರ ವಿಶ್ವವಿದ್ಯಾನಿಲಯದಲ್ಲಿ ಉಪಾಧ್ಯಾಯರಾಗಿ ಬೋಧನಾ ವೃತ್ತಿಯನ್ನು ಮುಂದುವರೆಸಿದರು. ೧೯ನೇ ಹಾಗು ೨೦ನೇ ಶತಮಾನದ ಪೋಲೆಂಡಿನ ಕಲೆಯಲ್ಲದೇ, ಏಷಿಯಾದ ಕಲಾ ಪ್ರಕಾರಗಳಲ್ಲಿ ಕೂಡ ಇವರು ಪರಿಣಿತಿಯನ್ನು ಹೊಂದಿದ್ದರು. ೧೯೫೬ರಲ್ಲಿ ದೆಹಲಿಯಲ್ಲಿ ನಡೆಯುತ್ತಿದ್ದ ಪೋಲಿಷ್ ಕಲಾ ಪ್ರದರ್ಶನಕ್ಕೆ ಆಯುಕ್ತರಾಗಿ ಭಾರತಕ್ಕೆ ಇವರನ್ನು ನಿಯೋಜಿಸಿದಾಗ ಇವರ ವೃತ್ತಿ ಜೀವನ ತಿರುವು ಪಡೆಯಿತು. ಇದಾದ ನಂತರ, ಸ್ವಾತಂತ್ರ ಪೂರ್ವ ಭಾರತೀಯ ಕಲೆಯಲ್ಲಿ ಮೂಡಿದ್ದ ವಿಶೇಶ ಆಸಕ್ತಿಯು ಆಂಡ್ರೆಯವರನ್ನು ಭಾರತಕ್ಕೆ ಇನ್ನೂ ಹಲವು ಬಾರಿ ಮರಳಿ ಬರುವಂತೆ ಮಾಡಿತು. ಹಾಗೆ ಬರುವಾಗ ಇನ್ನೂ ಹಲವಾರು ಪ್ರದರ್ಶನಗಳನ್ನು ಪೋಲೆಂಡಿನಿಂದ ಕರೆತಂದು ಆಯೋಜಿಸಿದರು. ಭಾರತಕ್ಕೆ ನೀಡಿದ ಹಲವು ಭೇಟಿ ಹಾಗೂ ಭಾರತೀಯ ಕಲೆಯ ಕುರಿತು ನಡೆಸಿದ ಸಂಶೋಧನೆಯ ಫಲವಾಗಿ ಅವರು ಭಾರತೀಯ ಕಲೆ ಹಾಗು ಪೂರ್ವದ ಕಲೆಗಳ ಕುರಿತಾದ ಆರ್ಟ್ ಆಫ್ ಇಂಡಿಯಾ(೧೯೭೨), ಆರ್ಟ್ ಆಫ್ ಇಂಡೋನೇಷಿಯಾ, ದಿ ವೆಸ್ಟ್ ಆಂಡ್ ದಿ ಆರ್ಟ್ ಆಫ್ ಈಸ್ಟ್ ಮುಂತಾದ ಪುಸ್ತಕಗಳನ್ನು ರಚಿಸಿದರು. ವೃತ್ತಿ ಜೀವನದ ಉತ್ತುಂಗದಲ್ಲಿದ್ದಾಗ ಪಾರ್ಶ್ವವಾಯುವಿಗೆ ಗುರಿಯಾಗಿ ಇವರು ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಮೊಟಕುಗೊಳಿಸಬೇಕಾಯಿತು. ಆದರೆ ದೈಹಿಕ ಅಸ್ವಸ್ಥತೆಯನ್ನು ಮೀರಿ ಬೆಳೆದ ಅವರ ಉತ್ಸುಕತೆಯು ಪೆನ್ಸಿಲ್ ಹಾಗು ಕ್ರೇಯಾನಿನ ಸೂಕ್ಷ್ಮವಾದ ಚಿತ್ರಗಳನ್ನು ತಮ್ಮ ಎಡಗೈನಲ್ಲೇ ರಚಿಸಿ, ಎರಡು ಕಲಾ ಪ್ರದರ್ಶನಗಳನ್ನೂ ನಡೆಸಲು ಅಡ್ಡಿಮಾಡಲಿಲ್ಲ.

ಕಲಾ ಪ್ರದರ್ಶನದ ಆಯುಕ್ತರಾಗಿದ್ದ ಕಾಲದಲ್ಲಿ, ಭಾರತಕ್ಕೆ ಬೇಟಿ ನೀಡಿ ತಮ್ಮ ದೇಶಕ್ಕೆ ಮರಳುವಾಗಲೆಲ್ಲಾ ಆಂಡ್ರೆರವರು, ನೆನಪಿಗಾಗಿ, ಸಣ್ಣ ಕಲಾತ್ಮಕ ವಸ್ತುಗಳನ್ನು ತಮ್ಮೊಂದಿಗೆ ಕೊಂಡೊಯ್ಯುತ್ತಿದ್ದರು. ಈ ವಸ್ತುಗಳನ್ನೇ ಮಾರ್ತಾರವರು ಯಾವುದೇ ಸಂಸ್ಕೃತಿಯ 'ಸೊಗಡು ಹಾಗು 'ವರ್ಣ'ಗಳನ್ನೊಳಗೊಂಡ, ಒಟ್ಟಾರೆಯಾಗಿ ಅವರಿಗೆ ಭಾರತದ 'ಅನುಭವ'ಗಳನ್ನು ನೀಡುತ್ತಿದ್ದ ವಸ್ತುಗಳೆಂದೇ ನೆನಪಿಸಿಕೊಳ್ಳುತ್ತಾರೆ. ಯೂರೋಪಿನಲ್ಲಿ ದೊರೆಯುತ್ತಿದ್ದ ಸಾಮೂಹಿಕವಾಗಿ ಉತ್ಪಾದಿಸಲಾದ ವಸ್ತುಗಳಿಗಿಂತ ಈ ವಸ್ತುಗಳಲ್ಲಿ ಇರುತ್ತಿದ್ದ ಸ್ಪರ್ಶ ಗುಣವು ಅವರನ್ನು ಸೆಳೆದಿದ್ದವು.

ಮಾರ್ತಾ, ತಮ್ಮ ಪೋಷಕರಂತೆ ಮುಖ್ಯ ವಿಷಯವಾಗಿ ಅಲ್ಲದಿದ್ದರೂ, ಅನೌಪಚಾರಿಕವಾಗಿ ಕಲಾ ಇತಿಹಾಸವನ್ನು ಅಧ್ಯಯನ ಮಾಡಿದರು. ವೈಯುಕ್ತಿಕವಾಗಿ ಅವರಿಗೆ ಸಾಧಾರಣವಾಗಿ ಅಭ್ಯಾಸ ಮಾಡುವ ವೈದ್ಯಕೀಯ, ತತ್ವಶಾಸ್ತ್ರವನ್ನು ಮೀರಿದ ವಿಷಯವನ್ನು ಅಭ್ಯಸಿಸುವ ಆಸಕ್ತಿಯಿತ್ತು. ಬಾಲ್ಯದಿಂದ ತಮ್ಮ ತಂದೆಯಿಂದ ಬೆಳೆದು ಬಂದ ಭಾರತದ ವಿಷಯದ ಕುರಿತಾದ ಆಸಕ್ತಿಯಿಂದ ಹಿಡಿದು ಹೊಸ ಸಂಸ್ಕೃತಿಗಳ ಕುರಿತು ತಿಳಿದುಕೊಳ್ಳುವ ಇಚ್ಛೆಯೊಂದಿಗೆ ವಾರ್ಸಾ ವಿಶ್ವವಿದ್ಯಾನಿಲಯದಲ್ಲಿ ಇಂಡಾಲಜಿ ವಿಷಯವನ್ನು ಆರಿಸಿಕೊಳ್ಳುವಂತೆ ಪ್ರೇರೇಪಿಸಿತು. ಭಾರತೀಯ ಸಂಸ್ಕೃತಿ ಕುರಿತು ಅಧ್ಯಯನ ನಡೆಸುವ ವಿಷಯವೇ ಇಂಡಾಲಜಿ. ಭಾರತೀಯ ಭಾಷೆಗಳ ಅಧ್ಯಯನ ಕೂಡ ಭಾಗವಾಗಿರುವ ಈ ವಿಷಯದಲ್ಲಿ ಸಂಸ್ಕೃತ ಪ್ರಮುಖವಾಗಿದ್ದು ಮಾರ್ತಾರವರು ಇದರಲ್ಲಿ ಪರಿಣಿತರಾಗಿರುವುದೂ ಹೌದು. ಇದರೊಂದಿಗೆ ಹಿಂದೂಸ್ತಾನಿ ಹಾಗು ದಕ್ಷಿಣ ಭಾರತದ ಭಾಷೆಗಳನ್ನೂ ಕೂಡ ಇದರ ಭಾಗವಾಗಿ ಕಲಿಕೆಗೆ ಅವಕಾಶವಿತ್ತು. ಆ ಸಂದರ್ಭದಲ್ಲಿ ವಾರ್ಸಾ ವಿಶ್ವವಿದ್ಯಾನಿಲಯದಲ್ಲಿ ದಕ್ಷಿಣ ಭಾರತೀಯ ಭಾಷೆಗಳನ್ನು ಕಲಿಸುವವರು ಯಾರೂ ಇಲ್ಲದಿದ್ದ ಕಾರಣದಿಂದಾಗಿ ಮಾರ್ತಾರವರ ಪ್ರಾಧ್ಯಾಪಕರು ಅವರಿಗೆ ಭಾರತಕ್ಕೆ ಹೋಗಿ ಈ ಭಾಷೆಗಳನ್ನು (ಅದರಲ್ಲೂ ಕನ್ನಡವನ್ನು) ಕಲಿತು ಮರಳಿಬಂದು ವಿಶ್ವವಿದ್ಯಾನಿಲಯದಲ್ಲಿ ಬೋಧಿಸುವ ಸಲಹೆಯನ್ನು ನೀಡಿದರು.

ವ್ಯಾಪಾರಿ ದೃಷ್ಟಿಯಿಂದ ಹೊಸ ಸ್ಥಳಗಳ ಅನ್ವೇಷಣೆಗೆ ಹೊರಟಾಗ ದೊರೆತ ದೇಶದ, ವಿಶಾಲವಾದ ಭೌಗೋಳಿಕತೆಯ ಮೇಲೆ ಹರಡಿರುವ ಬಹುಸಂಖ್ಯೆಯ ಸಂಸ್ಕೃತಿಗಳು, ಭಾಷೆಗಳು ಹಾಗು ವಿಚಾರಗಳನ್ನು ಅರ್ಥೈಸಿಕೊಳ್ಳುವ ಆಸಕ್ತಿಯ ಫಲವಾಗಿ ಹುಟ್ಟಿರುವ ವಿಷಯವೇ ಇಂಡಾಲಜಿ. ಹಲವು ಶತಮಾನದಿಂದ, ಅದರಲ್ಲೂ ೧೬೦೦ರಿಂದ ಪೂರ್ವವು ಪಾಶ್ಚಿಮಾತ್ಯರ ಆಸಕ್ತಿಯನ್ನು ಪ್ರಮುಖ ಭಾಗವಾಗಿದೆ. ವಸಾಹತೀಕರಣದ ಯುಗ ಮತ್ತು ಏಷ್ಯಾದ ರಾಷ್ಟ್ರದ ಕುರಿತಾಗಿ ಬೆಳೆಯುತ್ತಿದ್ದ ಆಸಕ್ತಿ ಹಾಗು ಕುತೂಹಲ ಆಸಕ್ತಿದಾಯವಾದ ಫಲಿತಾಂಶಗಳನ್ನು ನೀಡಿತು. ಇದರ ಪರಿಣಾಮವಾಗಿ ವಿವಿಧ ಕ್ಷೇತ್ರದ ವಿದ್ವಾಂಸರು ಇಲ್ಲಿಗೆ ಬಂದು ಭಾರತೀಯ ವಸ್ತುವಿಷಯದ ಕುರಿತಾಗಿ ಅಧ್ಯಯನ ನಡೆಸಲು ಬರುವಂತೆ ಮಾಡಿತು. ವಸ್ತುನಿಷ್ಠ ಪಾಶ್ಚಾತ್ಯ ಸಂಸ್ಕೃತಿಯು ಆಧ್ಯಾತ್ಮಿಕ ನೆಮ್ಮದಿಯ ಅನ್ವೇಷಣೆಯಲ್ಲಿ ಪೂರ್ವದ ಮೊರೆ ಹೊಕ್ಕಿತು. ಅನೇಕ ವಿಧ್ವಾಂಸರು ಭಾರತೀಯ ವಸ್ತು ವಿಷಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಸ್ಟೆಲ್ಲಾ ಕ್ರಾಮರಿಷ್‌ರವರಂತಹ ಕಲಾ ಇತಿಹಾಸ ಕಾರರು ಸಂಶೋಧನೆ, ಬೋಧನೆಯಲ್ಲಿ ತೊಡಗಿಸಿಕೊಂಡು ಭಾರತೀಯ ಕಲಾ ಇತಿಹಾಸದ ಕುರಿತಾದ ವ್ಯಾಪಕವಾದ ಕಾರ್ಯವನ್ನು ನಡೆಸಿದರು. ಅವರು ಭಾರತೀಯ ತತ್ವಶಾಸ್ತ್ರದ ಕುರಿತು ಪ್ರೀತಿ ಎಷ್ಟರಮಟ್ಟಿಗೆ ಇತ್ತೆಂದರೆ, ಆಕೆ ತಾನೇ ಹಿಂದು ಆಗಿ ಪರಿವರ್ತನೆಗೊಂಡಿದ್ದರು ಎನ್ನಲಾಗುತ್ತದೆ.

ಮಾರ್ತಾರವರ ಪದವಿಗೆ ಸಲ್ಲಿಸಲಾದ ಅಂತಿಮ ಪ್ರಬಂಧವು ಅವರ ಭಾರತೀಯ ಪುರಾಣ, ಪ್ರತಿಮಾಶಾಸ್ತ್ರ ಮತ್ತು ಸಾಂಕೇತಿಕ ಸಂಪ್ರದಾಯದ ಕುರಿತಾಗಿ ಇದ್ದ ಅವರ ಆಸಕ್ತಿಯಿಂದ ಮೂಡಿಬಂದಿತು. 'ಮೆಟಾಮಾರ್ಫೋಸಸ್ ಆಫ್ ಇಂಡಿಯನ್ ಗಾಡ್ಸ್'ಎಂಬ ಈ ಪ್ರಬಂಧವು ಇಂದಿನ ಆಂಧ್ರಾ ಪ್ರಾಂತ್ಯದ ಆಗ್ನೇಯ ಭಾಗದಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ರಚಿಸಲಾಗಿರುವ ೧೦೫ ಪೌರಾಣಿಕ ವರ್ಣಚಿತ್ರಗಳ ಕುರಿತಾಗಿದೆ. ಈ ವರ್ಣಚಿತ್ರಗಳು ಭಾರತದಿಂದ ಫ್ರೆಂಚ್‌ನವರ ಮೂಲಕ ಪ್ರಯಾಣಿಸಿ ಪೋಲೆಂಡಿನ ರಾಜನ ಗ್ರಂಥಾಲಯಕ್ಕೆ ತಲುಪಿದ್ದವು. ಈ ಸರಣಿ ಚಿತ್ರಗಳನ್ನು ಭಾರತೀಯ ದೇವ/ದೇವತೆಗಳ ಪ್ರತಿಮಾರೂಪವನ್ನು ಅರ್ಥೈಸಿಕೊಳ್ಳಲು ಬಳಸಲಾಗುತ್ತದೆ. ಈ ಚಿತ್ರಕಲೆಯನ್ನು ರಚಿಸಲು ತಂಜಾವೂರು ಚಿತ್ರಕಲೆಯ ಕಲಂಕಾರಿಯ ಸಮ್ಮೇಳನ ಹೊಂದಿದಂತೆ ಕಾಣುವ ಶೈಲಿಯ ಪ್ರಯೋಗವಾಗಿದೆ. ಈ ಚಿತ್ರಗಳನ್ನು ರಚಿಸಲು ಸಾಂಪ್ರದಾಯಿಕ ಶೈಲಿಯ ಬಳಕೆಯಾಗಿದ್ದರೆ ಅವುಗಳ ವರ್ಣ ಸಂಯೋಜನೆಯು ಕಲಂಕಾರಿಯಲ್ಲಿ ಬಳಸಲಾಗುವಂತಹ ಆಳವಾದ, ಐಹಿಕ ಬಣ್ಣಗಳ ಬಳಕೆಯಾಗಿದ್ದು ಅವುಗಳನ್ನು ಕಪ್ಪು ಮಸಿಯಲ್ಲಿ ರಚಿಸಿದ ಬಾಹ್ಯರೇಖೆಯಲ್ಲಿ ಬಂದಿಸಿಟ್ಟಿರುವಂತೆ ಕಾಣುತ್ತದೆ., ಈ ಚಿತ್ರಗಳು ಯಾವ ವಸಾಹತುಶಾಹಿ ಹಿನ್ನಲೆಯಲ್ಲಿ ನಿರ್ಮಿತವಾಗಿದ್ದವು ಮತ್ತು ಹೇಗೆ ಇವುಗಳು ಭಾರತೀಯ ಉಪಖಂಡದಲ್ಲಿ ಫ್ರೆಂಚ್‌ರ ಸೋಲಿನ ನಂತರ ಫ್ರಾನ್ಸ್ ತಲುಪಿದವು ಎಂಬ ವಿಷಯವನ್ನು ಈ ಸಂಶೋಧನೆಯ ಮೂಲಕ ಮಾರ್ತಾರವರು ನಿರೂಪಿಸುತ್ತಾರೆ. ಈ ಪ್ರಬಂಧವನ್ನು ೧೯೮೫ರಲ್ಲಿ ಮೊದಲ ಬಾರಿಗೆ ಪೋಲಿಷ್ ಭಾಷೆಯಲ್ಲಿ ಹಾಗು ತದನಂತರ ಸುಧಾರಿತ ಆವೃತ್ತಿಯನ್ನು ೧೯೮೮ರಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಯಿತು.

ಬರವಣಿಗೆಗಳು:

ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್ ಆಗಿದ್ದ ಡಾ. ನವೀನ್ ಷಾರವರೊಂದಿಗೆ ವಿವಾಹವಾಗಲು ೧೯೭೫ರಲ್ಲಿ ಮಾರ್ತಾ ಭಾರತಕ್ಕೆ ಬಂದರು. ಷಾರವರು ವಾರ್ಸಾ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿಗಾಗಿ ಅಧ್ಯಯನ ನಡೆಸುತ್ತಿದ್ದಾಗ ಮಾರ್ತಾರವರ ಭೇಟಿಯಾಗಿತ್ತು. ಭಾರತದ ಕುರಿತಾಗಿ ಅವರು ಅಧ್ಯಯನ ನಡೆಸಿದ್ದರೂ ಕೂಡ, ಇದು ಅವರ ಮೊದಲನೆಯ ಭೇಟಿಯಾಗಿತ್ತು. ಪೋಲೆಂಡಿನಲ್ಲಿ ಸಾಮಾಜಿಕ ಅಶಾಂತಿ ಅದಾಗಲೇ ಅನೇಕ ನಿವಾಸಿಗಳನ್ನು ಉತ್ತಮ ಅವಕಾಶಗಳ ಹುಡುಕಾಟದಲ್ಲಿ ವಲಸೆ ಹೋಗುವಂತೆ ಮಾಡಿತ್ತು. ರಾಜಕೀಯವಾಗಿ ಅಲ್ಲದಿದ್ದರೂ ವೈಯುಕ್ತಿಕ ಕಾರಣಗಳಿಂದಾಗಿ ಮಾರ್ತಾ ಪೋಲೆಂಡನ್ನು ತೊರೆದು ಬಂದಿದ್ದರು. ಆದರೆ ನಂತರದ ದಿನಗಳಲ್ಲಿ ತಮ್ಮ ವೈವಾಹಿಕ ಜೀವನದಲ್ಲಿ ಸಮಸ್ಯೆಗಳು ಬಂದರೂ ಸಹ ಅವರು ರಾಜಕೀಯ ಕಾರಣಗಳಿಂದಾಗಿ ತಮ್ಮ ದೇಶಕ್ಕೆ ವಾಪಸಾಗಲಿಲ್ಲ.

ಭಾರತದಲ್ಲಿ, ಅವರ ಆಸಕ್ತಿಯು ಭಾಷಾಶಾಸ್ತ್ರದಿಂದ ಕಲೆಯ ಕುರಿತು ಬರೆಯುವುದರೆಡೆಗೆ ವಾಲತೊಡಗಿತು. ೧೯೮೨ರಲ್ಲಿ ಅವರ ಆಸಕ್ತಿಯ ವಿಷಯವಾದ ಭಾರತೀಯ ಪುರಾಣಗಳ ಕುರಿತಾದ ಮಿಟೋಲೋಜಿಯಾ ಇಂಡಿಕಾ(ಇಂಡಿಯನ್ ಮಿಥಾಲಜಿ)ವನ್ನು ಪೋಲಿಷ್ ಭಾಷೆಯಲ್ಲಿ ಬರೆದು ಪೋಲೆಂಡ್‌ನಿಂದಲೇ ಪ್ರಕಟಿಸಿದರು. ಭಾರತೀಯ ಧರ್ಮಗಳು, ಪಂಥಗಳು ಮತ್ತು ವಿವಿಧ ಆಲೋಚನೆಗಳ ಇತಿಹಾಸದ ಕುರಿತಾದ ವಿವರಣೆಗಳನ್ನು ಈ ಪುಸ್ತಕವು ನೀಡುತ್ತದೆ. ಇದು ಭಾರತದಲ್ಲಿ ಪೂಜಿಸಲಾಗುವ ದೇವತೆಗಳು ಹಾಗು ಅವರ ಕುರಿತಾಗಿ ಇರುವ ಪುರಾಣ ಕಥೆಗಳು, ಪ್ರತಿಮಾರೂಪದ ಪ್ರಾತಿನಿಧ್ಯ ಹಾಗು ಸಾಂಪ್ರದಾಯಿಕ ಕಲಾ ಪ್ರಕಾರದ ಬೆಳವಣಿಗೆಯ ವಿವರವನ್ನೂ ಕೂಡ ಒಳಗೊಂಡಿದೆ. ಈ ಪುಸ್ತಕದಲ್ಲಿ ಶಾಸ್ತ್ರೀಯ ಜೈನ, ಬೌದ್ಧ ಮತ್ತು ಹಿಂದೂ ಕಲೆಯ ಆಯ್ದ ಸಚಿತ್ರ ವಿವರಣೆಗಳನ್ನೊಳಗೊಂಡಿದೆ. ಈ ಪುಸ್ತಕದಲ್ಲಿ ಆಂಡ್ರೆ ಯಾಕಿಮೋವಿಜ್ ರವರನ್ನು ಮುಖ್ಯ ಲೇಖಕರನ್ನಾಗಿ ಹಾಗಿ ಮಾರ್ತಾರವರನ್ನು ಸಹ ಲೇಖಕರೆಂದು ಉಲ್ಲೇಖಿಸಲಾಗಿದೆ. ಆದರೆ ಈ ಪುಸ್ತಕದ ಲೇಖಕರು ಮಾರ್ತಾರವರೇ ಆಗಿದ್ದಾರೆ. ಅದಾಗಲೇ ಲೇಖಕರಾಗಿ ಉತ್ತಮ ಹೆಸರನ್ನು ಪಡೆದ ಮಾರ್ತಾರವರ ತಂದೆಯ ಹೆಸರಿನಲ್ಲೇ ಈ ಪುಸ್ತಕ ಪ್ರಕಟವಾದರೆ ಪುಸ್ತಕಕ್ಕೆ ಉತ್ತಮ ಪ್ರತಿಕ್ರಿಯೆ ದೊರಕುವುದರೊಂದಿಗೆ ಹೊಸ ಬರಹಗಾರ್ತಿಯಾಗಿ ಅವರ ವೃತ್ತಿಜೀವನವೂ ಸ್ಥಾಪಿತವಾಗುವುದು ಎಂಬ ಆಶಯದೊಂದಿಗೆ ಪೋಲೆಂಡಿನ ಪುಸ್ತಕ ಪ್ರಕಾಶಕರು ಈ ಸಲಹೆಯನ್ನು ಇತ್ತರು. ಆದುದರಿಂದ ಅವರ ಮೊದಲ ಪ್ರಕಟಿತ ಪುಸ್ತಕವು ಅವರ ಕೆಲಸಕ್ಕೆ ಸಂಪೂರ್ಣವಾದ ಹೆಸರನ್ನು ನೀಡದೇ ಹೋಯಿತು. ಇದಾದ ನಂತರ, ಅವರು ಪ್ರಮುಖ ಹಿಂದೂ ದೇವತೆಗಳಾದ ಶಿವ ಹಾಗು ಕೃಷ್ಣನ ಕುರಿತಾದ ಎರಡು ಪುಸ್ತಕಗಳನ್ನು ಪೋಲಿಷ್ ಭಾಷೆಯಲ್ಲಿ ಪ್ರಕಟಿಸಿದರು.ಕೃಷ್ಣ ಹಾಗು ರಾಧೆಯ ದೈವಿಕ ಪ್ರೀತಿಯನ್ನು ಆರಾಧಿಸುವ ೧೨ನೇ ಶತಮಾನದ ಜಯದೇವ ಅವರ ಗೀತ ಗೋವಿಂದವನ್ನು ಸಂಸ್ಕೃತದಿಂದ ಪೋಲಿಷ್ ಭಾಷೆಗೆ ಬಹು ಆಸ್ಥೆಯಿಂದ ಅನುವಾದಿಸಿದರು. ನಿರಂತರವಾಗಿ ಬದಲಾಗುತ್ತಿದ್ದ ಪೋಲೆಂಡಿನ ಸಾಮಾಜಿಕ ಪರಿಸ್ಥಿತಿ ಮತ್ತು ಆಳವಾದ ಆರ್ಥಿಕ ಬಿಕ್ಕಟ್ಟಿನಿಂದ ಪ್ರಕಾಶಕರು ಸಿಗದೆ ದುರದೃಷ್ಟವಶಾತ್ ಈ ಅನುವಾದವು ಪ್ರಕಟಗೊಳ್ಳಲಿಲ್ಲ. ಸಂಸ್ಕೃತ ಭಾಷೆಯ ಮೇಲೆ ಅವರ ಹಿಡಿತ ಹಾಗು ಇತರ ಪ್ರಮುಖ ಕೃತಿಗಳ ಕುರಿತಾದ ಅವರ ಜ್ಞಾನವು ಭಾರತೀಯ ಸಂಸ್ಕೃತಿಯ ಕುರಿತಾದ ಅವರ ತಿಳುವಳಿಕೆಗೆ ಬಲವಾದ ಆಧಾರವಾಗಿ ನಿರ್ಮಾಣವಾಯಿತು. ಈ ಆಧಾರವೇ ಅವರನ್ನು ಭಾರತೀಯ ಕಲೆಯ ಕುರಿತಾದ ಬರಹಗಾರ್ತಿಯಾಗಿ ತಮ್ಮನ್ನು ತಾವು ಸ್ಥಾಪಿಸಿಕೊಳ್ಳಲು ಅನುವುಮಾಡಿತು.

ಕೆಲ ಕಾಲ ಅವರು ಹೈದರಾಬಾದ್ ಮತ್ತು ಅಹ್ಮದಾಬಾದ್‌ನಲ್ಲಿ ವಾಸವಾಗಿ ತಮ್ಮ ನೆಲೆಯನ್ನು ಬೆಂಗಳೂರಿಗೆ ಸ್ಥಳಾಂತರಿಸಿದರು.

ಕಲಾ ಬರವಣಿಗೆ:

ಪೋಲಿಷ್ ಬರಹಗಾರರಾಗಿದ್ದ ಮಾರ್ತಾರವರು ಭಾರತಕ್ಕೆ ಬಂದ ನಂತರ ಆಂಗ್ಲ ಭಾಷೆಯಲ್ಲಿ ಬರೆಯಲು ಪ್ರಾರಂಭಿಸಿದರು. ೧೯೮೪ರಲ್ಲಿ ಬೆಂಗಳೂರಿಗೆ ಬಂದ ನಂತರ, ಅವರು ಕಲಾ ವಿಮರ್ಶೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಆರಂಭದಲ್ಲಿ 'ಟೈಮ್ಸ್ ಆಫ್ ಡೆಕ್ಕನ್' ವೃತ್ತಪತ್ರಿಕೆಗಾಗಿ(ಈ ಪತ್ರಿಕೆ ಈಗ ಚಾಲನೆಯಲ್ಲಿ ಇಲ್ಲ) ಸಂಕ್ಷಿಪ್ತವಾಗಿ ಕೆಲಸ ಮಾಡಿ, ನಂತರ ದಿ ಹಿಂದೂ ಪತ್ರಿಕೆಯಲ್ಲಿ ಕೆಲ ಕಾಲ ಇದ್ದು ೧೯೮೬ರಲ್ಲಿ ಡೆಕ್ಕನ್ ಹೆರಾಲ್ಡ್ ವೃತ್ತ ಪತ್ರಿಕೆಗೆ ಬರೆಯಲು ಆರಂಭಿಸಿದರು. ಸುಮಾರು ೩೦ ವರ್ಷಗಳ ಕಾಲ, ಈ ಪತ್ರಿಕೆ ಜೊತೆಯಲ್ಲಿ ಇವರ ಒಡನಾಟವಿತ್ತು. ನಿಯಮಿತವಾಗಿ ಬರೆಯಲು ಅನುವು ಮಾಡಿಕೊಟ್ಟ ಡೆಕ್ಕನ್ ಹೆರಾಲ್ಡಿನ ಆಗಿನ ಮುಖ್ಯ ಸಂಸ್ಥಾಪಕರಾಗಿದ್ದ ಹರಿ ಕುಮಾರ್ ರವರನ್ನು ಮಾರ್ತಾರವರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ತಮ್ಮ ವೃತ್ತಿ ಜೀವನವನ್ನು ಆರಂಭಿಸಿದಾಗ ಸಂಗೀತದ ವಿಮರ್ಶೆಗಳಿಗೆ ಹೆಸರುವಾಸಿಯಾಗಿದ್ದ ಬಿ.ವಿ.ಕೆ ಶಾಸ್ತ್ರಿಯವರೂ ಸಹ ಕಲೆಯ ಕುರಿತಾದ ವಿಮರ್ಶೆಗಳನ್ನೂ ಅವರು ಬರೆಯುತ್ತಿದ್ದರು. ಕೆ.ವಿ ಸುಬ್ರಮಣ್ಯಂ ಹಾಗು ಚಿ. ಸು ಕೃಷ್ಣ ಸೆಟ್ಟಿಯವರಂತಹ ಲೇಖಕರು ಕನ್ನಡ ಮತ್ತು ಆಂಗ್ಲ ಭಾಷೆಯ ಪತ್ರಿಕೆಗಳಿಗೆ ಬರಹಗಳನ್ನು ನೀಡುತ್ತಿದ್ದರು. ತಮ್ಮ ಭಾಷಾ ಪ್ರಯೋಗ, ವಿಶ್ಲೇಷಣೆ ಹಾಗು ಬರವಣಿಗೆಯ ಸ್ಥಿರತೆಯಿಂದ ಈಗಾಗಲೇ ಸ್ಥಾಪಿತವಾಗಿರುವ ಪುರುಷ ಬರಹಗಾರರ ನಡುವೆ ತಮ್ಮದೇ ಆದ ಒಂದು ಸ್ಥಾನವನ್ನು ನಿರ್ಮಿಸಿಕೊಂಡರು. ಅವರ ವಿಮರ್ಶಾತ್ಮಕ ಬರವಣಿಗೆಗಳಲ್ಲಿ ವಿಶ್ಲೇಷಣೆಗೆ ಯಾವುದೇ ರೀತಿಯ ಸಮಾಧಾನಕರವಾದ ಪದಗಳ ಉಪಯೋಗದಿಂದ ಬಹಳ ದೂರ. ಸೌಂದರ್ಯದ ಕುರಿತಾದ ಬರವಣಿಗೆಯಲ್ಲಿ ಅವಶ್ಯಕರವಾದ ಭಾಷೆಯ ಬಳಕೆಯ ಕುರಿತು ಅವರ ನಂಬಿಕೆ ಬಹಳ ಆಳವಾದದ್ದು.

ಮಾರ್ತಾರವರ ಕ್ಯಾಟಲಾಗ್‌ಗಳಿಗೆ ಬರೆಯುತ್ತಿದ್ದ ಬರಹಗಳಿಗೆ ಹೋಲಿಸಿದರೆ ಪತ್ರಿಕೆಗಳಿಗಾಗಿ ಬರೆಯುತ್ತಿದ್ದ ವಿಮರ್ಶಾತ್ಮಕ ಲೇಖನಗಳಲ್ಲಿ ಅವರು ಹೆಚ್ಚು ಔಪಚಾರಿಕ ವಿಧಾನವನ್ನು ಅನುಸರಿಸಿದ್ದಾರೆ. ವೃತ್ತಪತ್ರಿಕೆಯ ವಿಮರ್ಶಾತ್ಮಕ ಲೇಖನಗಳಲ್ಲಿ ಕಲಾಕೃತಿಯ ಪ್ರತಿ ಮೇಲ್ಮೈ ವಿವರಗಳನ್ನು ಆಯ್ದು, ವಿವರಿಸಿ, ಅದರ ಮೂಲಕ ಕಲಾ ಕೃತಿಯ ಅನುಭವವನ್ನು ಕಟ್ಟಿಕೊಡುವ ರೀತಿಯಲ್ಲಿ ಬರೆಯುತ್ತಿದ್ದರು. ಅವರ ಬರಹಗಳಲ್ಲಿ ನಿರಂತರವಾಗಿ ಬೆಂಗಳೂರಿನ ವಿವಿಧ ಕಲಾ ಗ್ಯಾಲರಿಗಳಲ್ಲಿ ನಡೆಯುತ್ತಿರುವ ಕಲಾ ಚಟುವಟಿಕೆಗಳ ಕುರಿತು ಲೇಖನಗಳನ್ನು ಬರೆಯುತ್ತಿದ್ದರು. ವೃತ್ತಪತ್ರಿಕೆಗಳಿಗೆ ಇನ್ನೂ ಹಲವು ಬರಹಗಾರರು ತಮ್ಮ ಬರವಣಿಗೆಗಳನ್ನು ನೀಡುತ್ತಿದ್ದರೂ, ಅವರೆಲ್ಲರಿಗಿಂತ ಮಾರ್ತಾರವರ ಬರವಣಿಗೆಗಳು ನಿಯಮಿತವಾಗಿ ಪ್ರಕಟವಾಗುತ್ತಿದ್ದವು. ನಡೆಯುತ್ತಿದ್ದ

ಬಹುತೇಕ ಪ್ರದರ್ಶನಗಳ ಕುರಿತು ಬರೆದಿದ್ದಾರೆ. ಕಲಾ ಪ್ರಕಾರವೆಂದು ಇತರೆ ಬರಹಗಾರರು ಗುರುತಿಸದ ಕರಕುಶಲಕಲೆಗಳ ಪ್ರದರ್ಶನಗಳ ಕುರಿತಾಗಿಯೂ ಕೂಡ ಬರೆದಿದ್ದಾರೆ. ೮೦ರ ದಶಕದಲ್ಲಿ ಹೆಚ್ಚಿನ ಬರವಣಿಗೆಗೆ ಸ್ಥಳಾವಕಾಶವಿದ್ದ ಸಮಯದಲ್ಲಿ ಅವರ ಬರವಣಿಗೆಗಳು ಹೆಚ್ಚು ವಿಶ್ಲೇಶಾತ್ಮಕವಾಗಿದ್ದು, ವಿಸ್ತಾರವಾಗಿ ಕೂಡ ಇದ್ದವು. ರಾಷ್ಟ್ರೀಯ ಮಟ್ಟದ ಕಲೆಯ ಕುರಿತಾದ ನಿಯತಕಾಲಿಕೆಗಳು ಅಸ್ತಿತ್ವಕ್ಕೆ ಬಂದಿರದಿದ್ದ, ಕಲಾ ಪ್ರದರ್ಶನದ ಕ್ಯಾಟಲಾಗ್‌ಗಳು ಬಹಳ ಸರಳವಾದ, ಮಾಹಿತಿಯುಕ್ತ ಬರಹಕ್ಕೆ ಮಾತ್ರ ಸೀಮಿತವಾಗಿದ್ದ ಸಮಯದಲ್ಲಿ. ಮಾರ್ತಾರವರು ಬೆಂಗಳೂರಿನ ಹಲವಾರು ಕಲಾ ಪ್ರದರ್ಶನಗಳನ್ನು ತಮ್ಮ ವಿಮರ್ಶಾತ್ಮಕ ಲೇಖನಗಳ ಮೂಲಕ ದಾಖಲೀಕರಿಸುತ್ತಾರೆ. ಖಾಸಗಿ ಗ್ಯಾಲರಿಗಳಿಂದ ಹಿಡಿದು, ಸಾಂಸ್ಕೃತಿಕ ಸಂಸ್ಥೆಗಳಿಂದ ಆಯೋಜಿಸಲಾದ ಪ್ರದರ್ಶನಗಳು, ಹೆಸರಾಂತ ಕಲಾವಿದರಿಂದ ಉದಯೋನ್ಮುಖ ಕಲಾವೆದರು – ಇವೆಲ್ಲದರ ಕುರಿತಾದ ಲೇಖನಗಳನ್ನು ಬರೆದಿದ್ದಾರೆ. ಬರವಣಿಗೆಯ ಆರಂಭಿಕ ದಿನಗಳಲ್ಲಿ ಯಾವುದೇ ನಿಗದಿತ ದಿನವಿರದೆ ವಾರಕ್ಕೆ ಹಲವು ಬಾರಿ ಪ್ರದರ್ಶನಗಳ ವಿಮರ್ಶೆ ಬರೆಯುವ ಅವಕಾಶವಿತ್ತು. ಪ್ರತಿ ಪ್ರದರ್ಶನದ ಕುರಿತು ಬರೆಯುವಾಗಲೂ ಇಡೀ ಅಂಕಣವನ್ನು ಒಂದೇ ಪ್ರದರ್ಶನದ ಕುರಿತು ಬರೆಯುವ ಅವಕಾಶ ದೊರೆಯುತ್ತಿದ್ದುದು ನಂತರ ವಾರದ ಒಂದು ದಿನ, ಒಂದೇ ಅಂಕಣದಲ್ಲಿ ಹಲವಾರು ಪ್ರದರ್ಶನಗಳ ಕುರಿತು ಬರೆಯುಬೇಕಾಯಿತು. ಈ ನಿಯಮಿತವಾದ ಸ್ಥಳಾವಕಾಶವು, ಅವರ ವಿವರವಾದ ಬರವಣಿಗೆಯ ಮೇಲೆ ಪರಿಣಾಮ ಬೀರಿತು. ವೃತ್ತ ಪತ್ರಿಕೆಗಳು ಯಾವುದೇ ಅಂಕಣಗಳನ್ನು ಮೊಟಕುಗೊಳಿಸಲು ಯೋಚಿಸಿದಾಗ, ಮೊದಲಿಗೆ ಕಲೆಯ ಕುರಿತಾದ ಅಂಕಣಗಳೇ ಕೊಡಲಿಯ ಪೆಟ್ಟಿಗೆ ಗುರಿಯಾಗುತ್ತವೆ. ವೃತ್ತಿಪರ ಕಲಾ ಬರಹಗಾರರ ಬದಲಿಗೆ ಕೇವಲ ವಾಸ್ತವಿಕ ಮಾಹಿತಿಗೆ ಸೀಮಿತ ಬರವಣಿಗೆ ನಡೆಸುವ ತಮ್ಮ ಪರ್ತಕರ್ತರಿಂದಲೇ ಅಂಕಣಗಳನ್ನು ಬರೆಸುವುದೂ ಉಂಟು. ಈ ವಿಷಯವು ಇಂದಿನ ದಿನದಲ್ಲೂ ಪ್ರಸ್ತುತವಾಗಿದೆ.

೮೦ರ ದಶಕದಲ್ಲಿ ಕಲಾ ವಿಮರ್ಶೆಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿತ್ತು. ಮಾರ್ತಾರವರು ತಮ್ಮ ಬರಹಗಳ ಓದುಗರ ಜೊತೆಗೆ ನಡೆಸುತ್ತಿದ್ದ ವಾಚಕರ ವಾಣಿಯಲ್ಲಿನ ಸಂವಾದಗಳನ್ನು ಜೋಪಾನವಾಗಿ ಕಾಯ್ದಿರಿಸಿರುವುದು, ಇದಕ್ಕೆ ಪುರಾವೆಯಾಗಿ ದೊರೆಯುತ್ತದೆ. ಅವರ ಓದುಗರಲ್ಲಿ ಎರಡು ವಿಭಾಗಗಳಲ್ಲಿ ನೋಡಬಹುದು – ಒಂದು ಅವರ ಬರಹಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವವರು ಮತ್ತೊಬ್ಬರು ಅದರ ವ್ಯತಿರಿಕ್ತವಾದ ಅಭಿಪ್ರಾಯವನ್ನು ಹೊಂದಿದ್ದವರಾಗಿದ್ದವರು. ಕಲಾ ವಲಯದಲ್ಲೂ ಕೂಡ ಇದೇ ಸ್ಥಿತಿಯಾಗಿತ್ತು. ಕಲಾವಿದರ ಅಸಮಾಧಾನದ ಕುರಿತು ಅವರಿಗೆ ತಿಳುವಳಿಕೆ ಇದ್ದರೂ ಅವರಿಗೆ ತಮ್ಮ ಬರವಣಿಗೆಯಲ್ಲಿ ತಮ್ಮ ನಂಬಿಕೆಗಳಿಗೆ ಬದ್ಧವಾಗಿರುವ ಕುರಿತು ಸಮಾಧಾನವಿದೆ. ಮಾರ್ತಾರವರ ಬರವಣಿಗೆಯ ಕುರಿತು ಕೆಲವು ಕಲಾವಿದರಿಗೆ ಎಷ್ಟು ಅಸಮಾಧಾನವಿತ್ತೆಂದರೆ ಒಮ್ಮೆ ಒಂದು ಕಲಾ ಶಿಬಿರದಲ್ಲಿ ಇಬ್ಬರು ಹಿರಿಯ ಕಲಾವಿದರುಗಳು

ಚರ್ಚೆಯ ಮಧ್ಯದಲ್ಲಿ ಯಾವ ಯಾವ ಕಲಾ ವಿಮರ್ಶಕರ ಮೇಲೆ ದೊಡ್ಡ ಲಾರಿಯನ್ನು ಹರಿಸಬೇಕು ಎಂಬ ಆಲೋಚನೆ ಬಂದಿತಂತೆ. ಆ ಪಟ್ಟಿಯಲ್ಲಿ ಮೊದಲನೆಯ ಹೆಸರು ಮಾರ್ತಾರವರದ್ದೇ ಇತ್ತಂತೆ! ತಮ್ಮ ನೇರ ಅಭಿಪ್ರಾಯಗಳು ಹಾಗು ನಿಷ್ಕಪಟವಾದ ಧ್ವನಿಯ ಕಾರಣದಿಂದಾಗಿ ಮಾರ್ತಾ ಎಂದಿಗೂ ಕಲಾ ವಲಯದಲ್ಲಿ ನೆಚ್ಚಿನವರಾಗಿರಲಿಲ್ಲ ಎಂದು ಈ ಘಟನೆ ತಿಳಿಯ ಪಡಿಸುತ್ತದೆ.

ವೃತ್ತಪತ್ರಿಕೆಗೆ ಮೂರು ದಶಕಗಳ ಕಾಲ, ಕಲಾ ವಿಮರ್ಶಕರಾಗಿ ದುಡಿಯುವುದು ಎಷ್ಟು ಅಸಾಮಾನ್ಯವೋ ಒಂದು ದಿನಪತ್ರಿಕೆಯು ಒಬ್ಬ ಕಲಾ ವಿಮರ್ಶಕರನ್ನು ಅಷ್ಟು ವರ್ಷಗಳ ಕಾಲ ಉಳಿಸಿಕೊಂಡಿರುವುದು ಕೂಡ ಅಷ್ಟೇ ಅಸಾಮಾನ್ಯಕರವಾದ ಸಂಗತಿ. ಷಾರೊಂದಿಗಿನ ಅವರ ವೈವಾಹಿಕ ಜೀವನ ಕೊನೆಗೊಂಡು, ಕಲಾವಿದ ಕೆ.ಟಿ. ಶಿವ. ಪ್ರಸಾದ್‌ರವರ ಜೊತೆಗಿನ ಸಂಬಂಧ ಅವರನ್ನು ಹಾಸನಕ್ಕೆ ಸ್ಥಳಾಂತರಿಸಬೇಕಾದಾಗಲೂ, ಅವರು ನಗರಕ್ಕೆ ವಾರಕ್ಕೆ ಮೂರು ಬಾರಿ ಪ್ರಯಾಣಿಸುತ್ತಾ ಕಲಾ ಪ್ರದರ್ಶನಗಳ ಕುರಿತಾದ ಅವರ ಬರವಣಿಗೆಗಳನ್ನು ಅವಿರತವಾಗಿ ನಡೆಸಿಕೊಂಡು ಬರುತ್ತಲೇ ಇದ್ದರು. ಕಲಾ ಪ್ರದರ್ಶನದ ವಿಮರ್ಶೆಗಳ ಹೊರತಾಗಿ ಅವರು ಕಲಾವಿದರು, ಅವರ ಕೃತಿಗಳು ಮತ್ತು ಪ್ರಾದೇಶಿಕ ಮತ್ತು ರಾಷ್ಟ್ರೀಯ ಕಲಾವಿದರುಗಳ ಕಲಾಕೃತಿಗಳ ಕುರಿತಾದ ವಿಸ್ತಾರವಾದ ಲೇಖನಗಳನ್ನೂ ಸಹ ಬರೆಯುತ್ತಿದ್ದರು. ಅವರು ಕಲೆ ಹಾಗು ಸಂಸ್ಕೃತಿಯ ಕುರಿತಾದ ಪುಸ್ತಕಗಳನ್ನು ಕೂಡ ವಿಮರ್ಶಿಸಿ ಬರೆಯುತ್ತಿದ್ದರು.

ಮಾರ್ತಾರವರು ಬರಹಗಾರರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದಾಗ, ಅಂತರರಾಷ್ಟ್ರೀಯ ಪ್ರವೃತ್ತಿಯ ಕಡೆಗೆ ಮುಖಮಾಡಿ ನಿಂತ ಸಮಕಾಲೀನ ಕಲಾವಿದರ ಹೊಸ ಪೀಳಿಗೆಯ ಪ್ರಾರಂಭವನ್ನು ಎದುರು ನೋಡುತ್ತಿದ್ದ ಕರ್ನಾಟಕದ ಕಲೆಯು ತನ್ನ ಆಧುನಿಕತೆಯ ಕೊನೆಯ ಹಂತದಲ್ಲಿತ್ತು. ಮೂವತ್ತು ವರ್ಷಗಳ ಕಾಲ ಬರೆದಿರುವ ಅವರ ವಿಮರ್ಷಾತ್ಮಕ ಲೇಖನಗಳು, ಸ್ಥಳೀಯ ಕಲಾ ಅಭ್ಯಾಸದ ಕುರಿತಾದ ದಾಖಲೆಯಾಗಿ ಮಾರ್ಪಾಡಾಗಿದೆ. ಈ ಲೇಖನಗಳು ಬೆಂಗಳೂರಿನ ಕಲಾ ಪ್ರದರ್ಶನ ಸಂಸ್ಕೃತಿ, ವಿವಿಧ ಗ್ಯಾಲರಿಗಳ ಸಿದ್ಧಾಂತಗಳ ಕುರಿತಾದ ವಿಸ್ತಾರವಾದ ದಾಖಲೆಯಾಗಿ ಕೂಡ ಮಾರ್ಪಾಡಾಗಿದೆ.

ಅವರ ಬರಹಗಳನ್ನು ಪುನರಾವಲೋಕಿಸಿದಾಗ ಅವುಗಳು ೧) ಬೆಂಗಳೂರಿನಲ್ಲಿನ ಕಲಾ ವಲಯದಲ್ಲಿನ ಅಭ್ಯಾಸ ಮತ್ತು ೨) ಕರ್ನಾಟಕದ ಕಲಾ ಅಭ್ಯಾಸ (ಬೆಂಗಳೂರು ಅಧಿಕೇಂದ್ರವಾಗಿ) ವನ್ನು ಮರುಸೃಷ್ಟಿಸಿಕೊಡುತ್ತದೆ. ಮೊದಲನೆಯದು ನಗರ ಪ್ರದೇಶದ ಕಲಾ ಅಭ್ಯಾಸವನ್ನು ಸೂಚಿಸಿದರೆ ಎರಡನೆಯದು ಎಲ್ಲೆಡೆಯ ಕಲಾಕೃತಿಗಳನ್ನು ಪ್ರದರ್ಶಿಸುವ ಪ್ರಮುಖ ಕೇಂದ್ರಗಳಾಗಿ ನಗರಗಳು ಬದಲಾಗುತ್ತಿರುವ ಪ್ರಕ್ರಿಯೆಯನ್ನು ಸೂಚಿಸುತ್ತದೆ(ಇದರಿಂದಾಗಿ ಮತ್ತೊಂದೆಡೆ ನಗರ ಪ್ರದೇಶಗಳಲ್ಲಿ ಹೊರತು ಪಡಿಸಿ,

ರಾಜ್ಯದ ಇತರ ಸ್ಥಳಗಳಲ್ಲಿ ನಡೆಯುವ ಪ್ರದರ್ಶನಗಳು ಕಲೆಯ ಕುರಿತಾದ ಬರವಣಿಗೆಯ ಕೊರತೆಯಿಂದಾಗಿ, ಕಲಾ ಇತಿಹಾಸದ ಭಾಗವಾಗುವ ಅವಕಾಶವನ್ನು ಕಳೆದು ಕೊಳ್ಳುವ ಪ್ರವೃತ್ತಿಯನ್ನು ಸೂಚಿಸುತ್ತಾ ನಗರ ಪ್ರದೇಶದಲ್ಲಿ ಪ್ರದರ್ಶನಗೊಂಡ ಕಲಾಕೃತಿಗಳಿಗೆ ಮಾತ್ರ ದೊರೆಯುವ ಅನುಮೋದನೆಯಿಂದಾಗಿ, ನಗರಗಳು ಕಲೆಗೆ ಮನ್ನಣೆ ನೀಡುವ ಅಧಿಕೃತ ಕೇಂದ್ರಗಳಾಗಿ ಮಾರ್ಪಾಡಾಗಿರುವುದನ್ನು ಸೂಚಿಸುತ್ತದೆ.

ಪತ್ರಿಕೆಗಳಲ್ಲದೆ, ಮಾರ್ತಾರವರು ಆರ್ಟ್ ಇಂಡಿಯಾದಂತಹ ನಿಯತಕಾಲಿಕೆಗಳಿಗೆ ವಿಮಾರ್ಶಾತ್ಮಕ ಲೇಖನಗಳನ್ನು ನೀಡಿದ್ದಾರೆ. ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯವಾದ ಪ್ರಸರಣ ಹೊಂದಿರುವ ನಿಯತಕಾಲಿಕೆಗಳಿಗೆ ನೀಡಿದ ಅವರ ಬರಹಗಳಿಂದ ಪ್ರಾದೇಶಿಕ ಕಲಾವಿದರುಗಳ ಕಲಾಕೃತಿಗಳಿಗೆ ಗೋಚರತೆ, ಮಾನ್ಯತೆ ಹಾಗು ಅವರ ವೃತ್ತಿ ಜೀವನಕ್ಕೆ ಚಾಲನೆ ದೊರೆಯಿತು.

ಅವರ ಸುದೀರ್ಘವಾದ ಲೇಖನಗಳು ಇಂಡಿಯನ್ ಕಂಟೆಂಪೊರರಿ ಆರ್ಟ್ ಪೋಸ್ಟ್ ಇಂಡಿಪೆಂಡೆನ್ಸ್ (ಪ್ರ: ವಧ್ಹೇರಾ ಕಲಾ ಗ್ಯಾಲರಿ, ನವ ದೆಹಲಿ, ೧೯೯೭), ಏಳು ಮಹಿಳಾ ಕಲಾವಿದರುಗಳನ್ನು ಒಳಗೊಂಡ ಹಾಗು ಪ್ರತಿ ಕಲಾವಿದರುಗಳ ಕುರಿತು ಒಬ್ಬ ಲೇಖಕಿ ಬರೆದಿರುವ, ರೂಬೀನಾ ಕರೋಡ್‌ರವರ ನಿರೂಪಣೆಯ ಪ್ರದರ್ಶನದ ಸಂಯೋಗದೊಂದಿಗೆ ಪ್ರಕಟಿಸಲಾದ 'ಸೆವೆನ್ ಕಂಟೆಂಪೊರರೀಸ್' (ಪ್ರ: ಕಿರಣ್ ನಡಾರ್ ಕಲಾ ಸಂಗ್ರಹಾಲಯ, ನವ ದೆಹಲಿ ೨೦೧೩) ಹಾಗು ೧೯೯೧ರಲ್ಲಿ ಹಿರಿಯ ಕಲಾವಿದ ಬಿಕಾಷ್ ಭಟ್ಟಾಚಾರ್ಜಿ(ಪ್ರ: ಕಲಾ ಯಾತ್ರೆ) ಕುರಿತಾದ ಏಕ ವ್ಯಕ್ತಿ ಚಿತ್ರಣವನ್ನೂ ಕೂಡ ಪ್ರಕಟಿಸಿದ್ದಾರೆ.

ನಿರೂಪಣೆ:

ಸುಮಾರು ಎರಡು ದಶಕಗಳ ಕಲಾ ಬರವಣಿಗೆಯ ನಂತರ, ೨೦೦೦ ಇಸವಿಯ ನಂತರ ಕಲಾ ಪ್ರದರ್ಶನಗಳನ್ನು ನಿರೂಪಿಸಲು ಪ್ರಾರಂಭಿಸಿದರು. ೨೦೦೧ರಲ್ಲಿ ಸಾಕ್ಷಿ ಕಲಾ ಗ್ಯಾಲರಿಯ(ಮುಂಬೈ ನಗರಕ್ಕೆ ಸ್ಥಳಾಂತರಗೊಳ್ಳುವ ಮೊದಲು ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು) ೧೦ನೇ ವರ್ಷ ಆಚರಣೆಗಾಗಿ ಪ್ರದರ್ಶನವನ್ನು ಮಾರ್ತಾರವರು ಅಲಯನ್ಸ್ ಫ್ರಾಂಸೇನಲ್ಲಿ ಪ್ರದರ್ಶನಗೊಂಡ 'ಆನ್ ಎಡ್ಜ್ ಆಫ್ ವಾಲ್ಯೂವ್' ನಿರೂಪಿಸಿದರು. ಈ ಪ್ರದರ್ಶನವು ಶಿಲ್ಪದ ಪರಿಕಲ್ಪನೆಯನ್ನು ಮರುವ್ಯಾಖ್ಯಾನಿಸಿದ ಕಲಾವಿದರ ಕಲಾಕೃತಿಗಳನ್ನು ಒಳಗೊಂಡಿತ್ತು. ಹೆಸರೇ ಸೂಚಿಸುವಂತೆ ಕಲೆಯಲ್ಲಿನ ಪರಿಮಾಣವನ್ನು ಔಪಚಾರಿಕ ರೀತಿಯಲ್ಲಿ ಶಿಲ್ಪಕಲಾಕೃತಿಯ ಪರಿಚಿತ ವಿವರಣೆಯನ್ನು ನಿರಾಕರಿಸಿ ನಿರ್ಮಿಸಿದ ಕಲಾಕೃತಿಗಳ ಕುರಿತಾಗಿದೆ.

ಕಲಾವಿದರನ್ನು ಮತ್ತು ಅವರ ಕಲಾಕೃತಿಗಳಲ್ಲಿನ ಬೆಳವಣಿಗೆಯನ್ನು ಬಹಳ ನಿಕಟವಾಗಿ ಗಮನಿಸುತ್ತ ಬರುತ್ತಿದ್ದ ಬರಹಗಾರರಲ್ಲಿ ಮಾರ್ತಾ ಕೂಡ ಒಬ್ಬರು. ಕಲಾ ವಿಮರ್ಶಕರಾಗಿ ಕೆಲಸ ಮಾಡಿದ್ದು ಕಲಾವಿದರ ಕಲಾಕೃತಿಗಳ ವಿಕಸನವನ್ನು ಗಮನಿಸುತ್ತಾ ಬರುವಲ್ಲಿ ಸಹಾಯ ಮಾಡಿತು. ಪ್ರಾದೇಶಿಕ ಹಾಗು ರಾಷ್ಟ್ರೀಯ ಕಲಾ ಪದ್ಧತಿಗಳ ತಿಳುವಳಿಕೆಯೊಂದಿಗೆ, ಕಲಾ ಬರಹಗಾರರಾಗಿ ಕೆಲಸ ಮಾಡಿದ್ದು ಅವರ ನಿರೂಪಣಾ ಪದ್ಧತಿಗೆ ಅತ್ಯುತ್ತಮ ಆವರಣವನ್ನು ದೊರಕಿಸಿಕೊಟ್ಟಿತು. ಅವರ ಪ್ರದರ್ಶನಗಳು ಒಂದು ಕೇಂದ್ರೀಕೃತ ಕಲ್ಪನೆಯ ವಿಷಯದ ಮೇಲೇ ಕಟ್ಟುನಿಟ್ಟಾಗಿ ಆಧಾರಿತವಾಗಿರುತ್ತಿದ್ದವು. ನಿರೂಪಕರಾಗಿ ಮಾರ್ತಾರವರ ಪ್ರದರ್ಶನಗಳು ಅವರಿಗೆ ಅವಕಾಶ ನೀಡುತ್ತಿದ್ದ ಗ್ಯಾಲರಿಗಳಿಗೆ ಆರ್ಥಿಕವಾಗಿ ಯಶಸ್ವಿಯಾಗುತ್ತಿರುವುದರ ಜೊತೆಗೆ ದೃಶ್ಯಕಲೆಯೊಳಗೆ ಬೆಳೆಯುತ್ತಿರುವ ಪ್ರವೃತ್ತಿಗಳನ್ನು ಕೂಡ ಅವರ ಪ್ರದರ್ಶನಗಳ ಮೂಲಕ ಅವರು ಪ್ರತಿನಿಧಿಸುತ್ತಿದ್ದರು. ಉದಾಹರಣೆಗೆ ಮೆಕ್ಯಾನಿಸಮ್ ಆಫ್ ಮೋಷನ್(೨೦೦೮) ಪ್ರದರ್ಶನದಲ್ಲಿ ಚಲನೆಯ ಆಧಾರದ ಮೇಲೆ ನಿರ್ಮಿಸಿರುವ ಕಲಾಕೃತಿಗಳ ಪ್ರದರ್ಶನವಾಗಿತ್ತು. ಈ ಅಸಾಂಪ್ರದಾಯಿಕ ಪ್ರದರ್ಶನವು ಆಗಿನ ಕಲಾವಿದರಲ್ಲಿ ಹೆಚ್ಚು ಜನಪ್ರಿಯವಾಗಿದ್ದ ಹೊಸ ಮಾಧ್ಯಮಗಳ ಬಳಕೆಯನ್ನು ಪ್ರತಿನಿಧಿಸುತ್ತದೆ. ಕಲಾವಿದರು ಹೊಸ ಯುಗದ ತಂತ್ರಜ್ಞಾನದೊಂದಿಗೆ ನಡೆಸುತ್ತಿದ್ದ ಪ್ರಯೋಗಗಳಿಂದಾಗಿ ವರ್ಣಚಿತ್ರಗಳಿಂದ ಹೊಸ ತಂತ್ರಜ್ಞಾನದ ಬಳಕೆಯೆಡೆಗೆ ಪ್ರಜ್ಞಾಪೂರ್ವಕವಾಗಿ ಸರಿಯುತ್ತಿದ್ದ ಕಾಲವನ್ನು ಸೂಚಿಸುತ್ತದೆ. ಈ ಪ್ರದರ್ಶನವು ನಿಯಮಿತ ಅಭ್ಯಾಸದಿಂದ ರೂಪಾಂತರಗೊಂಡಿದ್ದ ಕಲಾಕೃತಿಗಳನ್ನು ಒಳಗೊಂಡಿತ್ತು. ಉದಾಹರಣೆಗೆ ರನ್ಬೀರ್ ಕಲೇಕಾರವರ ಕೃತಿಯಲ್ಲಿ ಕ್ಯಾನ್ವಾಸಿನ ಮೇಲೆ ಪ್ರೊಜೆಕ್ಷನ್ ಮೂಲಕ ವ್ಯಾಪಿಸಿರುವ ವಿಡಿಯೋವನ್ನು ಒಳಗೊಂಡಿತ್ತು. ವಿಡಿಯೋದಲ್ಲಿ ಚಿತ್ರಕಲೆಯಲ್ಲಿ ಇರುವ ಹಾಗೆ ನಿಖರವಾದ ಸಂಯೋಜನೆ ಇದ್ದುದರಿಂದ ವರ್ಣಚಿತ್ರ ಹಾಗು ವಿಡಿಯೋವಿನ ವ್ಯತ್ಯಾಸ ಗುರುತಿಸಲಾಗದಷ್ಟು ಸೂಕ್ಷ್ಮವಾಗಿತ್ತು. ಚಿತ್ರಕಲೆಯಲ್ಲಿ ಇಲ್ಲದ ಚಲನೆಯನ್ನು ವಿಡಿಯೋ ದೊರಕಿಸಿಕೊಟ್ಟರೆ, ವಿಡಿಯೋ ಮುಗಿದ ನಂತರವೂ ಕ್ಯಾನ್ವಾಸಿನ ಮೇಲೆ ಕಾಣಸಿಗುವ ದೃಶ್ಯ ವಿಡಿಯೋ ಮಾಧ್ಯಮವನ್ನು ನೆನಪಿಸುವ ಹಾಗೆ ಇತ್ತು. ಈ ಕಲಾಕೃತಿಯು ಬದಲಾಗುತ್ತಿದ್ದ ಪ್ರವೃತ್ತಿಯನ್ನು ತಿಳಿಯಪಡಿಸಲು ಹಾಗು ಸಾಂಪ್ರದಾಯಿಕ ಮಾಧ್ಯಮಗಳಲ್ಲಿ ಲಭ್ಯವಿಲ್ಲದ ಅನುಭವಗಳನ್ನು ನೀಡುವುದಕ್ಕಾಗಿ ಈ ಕಲಾಕೃತಿಯನ್ನು ಉತ್ತಮ ಉದಾಹರಣೆಯಾಗಿ ಕಾಣಬಹುದು.

೨೦೦೯ರಲ್ಲಿ ವಾಸ್ತು ಶಿಲ್ಪದ ವಸ್ತುವಿಷಯದ ಮೇಲೆ ಕೋಲಾಬ್ ಆರ್ಟ್ ಮತ್ತು ಆರ್ಕಿಟೆಕ್ಚರ್‌ರವರ ಸಹಯೋಗದೊಂದಿಗೆ ನಡೆಸಲಾಯಿತು. ಈ ಪ್ರದರ್ಶನವನ್ನು ವಾಸ್ತುಶಿಲ್ಪ ಸಂಸ್ಥೆಯ ವಾಣಿಜ್ಯ ಕಟ್ಟಡ ಪೂರ್ಣಗೊಂಡ ಸಂದರ್ಭದಲ್ಲಿ ಹೊಸ ಕಟ್ಟಡದ ಉದ್ಘಾಟನೆಗಾಗಿ ಆಯೋಜಿಸಲಾಗಿತ್ತು. ಕೃತಿಗಳ ಪ್ರದಾರ್ಶನವನ್ನು ಆಯೋಜಿಸುತ್ತಿದ್ದ ವಾಸ್ತುಶಿಲ್ಪದ ಸಂಸ್ಥೆಗೆ ಅನುಗುಣವಾಗಿ ಆಯೋಜಿಸಲಾಗಿತ್ತು. ಈ ಪ್ರದರ್ಶನವು ಗಮನಾರ್ಹವಾಗಿ ವಿಸ್ತಾರವಾಗುತ್ತಿದ್ದ ನಗರ ಪ್ರದೇಶವನ್ನು ಸೂಚಿಸುತ್ತದೆ.

ಮಾರ್ತಾರಿಗೆ ತಮ್ಮ ಅಸ್ಮಿತೆಯ ಕುರಿತಾದ ಗ್ರಹಿಕೆ ವಿಶಿಷ್ಟವಾಗಿದೆ. ಅಸ್ಮಿತೆಯ ಕುರಿತಾದ ವ್ಯಾಪಕವಾದ ಚರ್ಚೆಯಿರುವಾಗ, ರಾಷ್ಟ್ರೀಯತೆಯನ್ನು ಮೀರಿ ತಮ್ಮನ್ನು ತಾವು ಮಾನವಕುಲಕ್ಕೆ ಸೇರಿದವರೆಂದು ಮಾತ್ರ ಹೇಳುತ್ತಾರೆ. ಇದನ್ನು ಹೇಳುವಾಗ ರಾಷ್ಟ್ರಕವಿ ಕುವೆಂಪುರವರ ವಿಶ್ವಮಾನವ ಪರಿಕಲ್ಪನೆಯನ್ನು ತಮಗೆ ತಿಳಿಯದೆಯೇ ನೆನಪಿಸುತ್ತಾರೆಯೂ ಹೌದು. ಜಾತಿ, ಧರ್ಮ, ಗಡಿಗಳನ್ನು ಮೀರಿದ ಅಸ್ಮಿತೆಯಲ್ಲಿಯೇ ಅವರ ನಂಬಿಕೆ. ಆದರೆ ವಲಸಿಗರಲ್ಲಿ ಈ ಅಸ್ಮಿತೆಯ ವಿಚಾರದ ಗ್ರಹಿಕೆ ಹೆಚ್ಚು ಸಂಕೀರ್ಣವಾಗಿದ್ದು ಅಸ್ಥಿರ ಅಥವಾ/ಹಾಗು ಬಹುವಿಧವಾದದ್ದಾಗಿರುತ್ತದೆ. ಉದ್ದೇಶಪೂರ್ವಕವಾಗಿ, ಪ್ರಜ್ಞಾಪೂರ್ವಕವಾಗಿ ಅವರು ತಮ್ಮ ಹಿಂದಿನ ಹಾಗು ಇಂದಿನ ಮೊದಲು ಪೋಲೆಂಡಿನ ಹಾಗು ತದನಂತರದ ಭಾರತದಲ್ಲಿನ ತಮ್ಮ ಜೀವನದ ಅಭಿನ್ನತೆಯನ್ನು ಉಪೇಕ್ಷಿಸುತ್ತಾರೆ. ತಮ್ಮ ಗುರುತಲ್ಲದೇ ಭಾರತದಂತಹ ವಿವಿಧ ಸಂಸ್ಕೃತಿಗಳನ್ನೊಳಗೊಂಡಿರುವ ರಾಷ್ಟ್ರವನ್ನು ನೋಡುವಾಗಲೂ ಅವರ ಸಿದ್ಧಾಂತವು ಇದೇ ಆಗಿರುತ್ತದೆ. ಅವರು ನಿರೂಪಿಸಿರುವ ಪ್ರದರ್ಶನಗಳನ್ನು ವಿಶ್ಲೇಷಿಸುವಾಗ ಈ ಸಿದ್ಧಾಂತವೇ ಕಾಣಸಿಗುತ್ತದೆ. ಅವರ ಎಲ್ಲಾ ಪ್ರದರ್ಶನಗಳಲ್ಲಿಯೂ ಸಹ ಯಾವುದೇ ಪ್ರದೇಶದ ಕುರಿತಾದ ವಿಷಯ/ಕಲಾವಿದರುಗಳಿರದೆ ದೇಶದ ವಿವಿಧ ರಾಜ್ಯದ ಕಲಾವಿದರುಗಳನ್ನೊಳಗೊಂಡು ವಸ್ತುವಿಷಯದ ಆಧಾರಿತವಾಗಿರುವುದು ಕಾಣಸಿಗುತ್ತದೆ.

(ಮಾರ್ತಾರವರ ಇತರ ಪ್ರದರ್ಶನಗಳು:)

ಎಂಚಾಂಟಿಂಗ್ ಐಕಾನ್(೨೦೦೩)
ಸಟಲ್ಟೀ–ಮಿನಿಮಲೀ(೨೦೦೪)
ದಿ ಇನ್ವರ್ಟೆಡ್ ಟ್ರೀ(೨೦೦೪)
ಟೂವರ್ಡ್ಸ್ ಅಬ್ಸ್ಟ್ರಾಕ್ಷನ್(೨೦೦೫)
ದಿ ಹ್ಯೂಮನ್ ಫಿಗರ್(೨೦೦೬)
ಐಕನೋಗ್ರಫಿ ಇನ್ ಟ್ರಾನ್ಸಿಯಂಟ್ ಟೈಮ್ಸ್(೨೦೦೭)
ದಿ ಹ್ಯೂಮನ್ ಆನಿಮಲ್(೨೦೦೯)
ಚೇಂಜಿಂಗ್ ಸ್ಕಿನ್(೨೦೧೦) ಡಾಲ್ಸ್ (೨೦೧೧)

ಭಾರತದಲ್ಲಿ ಮೂವತ್ತು ವರ್ಷಗಳ ಕಾಲ ಇದ್ದು, ನಿರೂಪಕಾರಗಿ ದುಡಿದು, ಕಲಾ ವಿಮರ್ಶಕರಾಗಿ ಕಲಾವಿದರುಗಳೊಂದಿಗೆ ಸಮೀಪದ ಒಡನಾಡವಿಟ್ಟುಕೊಂಡೂ ಸಹ ಮಾರ್ತಾರವರು ಕಲಾ ಸಂಗ್ರಹಕರಾಗಿಲ್ಲ. ಪ್ರದರ್ಶನದ ಕ್ಯಾಟಲಾಗಿಗೆ ರಚಿಸಿದ ಲೇಖನದ ಪ್ರತಿಯಾಗಿ ಕಲಾವಿದರು ಸ್ವ–ಇಚ್ಛೆಯಿಂದ ಕಲಾಕೃತಿಗಳನ್ನು ಉಡುಗೊರೆಯಾಗಿ ನೀಡಿದರೂ ಸಹ ನೈತಿಕತೆಯ ದೃಷ್ಟಿಯಿಂದ, ಅವರ ಬರಹವನ್ನು ಬಾಧ್ಯತೆಗಳಿಂದ ಮುಕ್ತವಾಗಿಡಲು ಕಲಾಕೃತಿಗಳನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಕಲ್ಲಿನಲ್ಲಿ ಕಟ್ಟಿದ ಅವರ ಮನೆಯನ್ನು

ಅವರ ಪ್ರಿಯವಾದ ಜನಪದ ಕಲಾಕೃತಿಗಳಿಂದ ಅಲಂಕರಿಸಿದ್ದಾರೆ...ಛಾವಣಿಯಿಂದ ಮೆಟ್ಟಿಲುಗಳಿಗೆ ಕಟ್ಟಿರುವ ಸರಳುಗಳಿಗೆ ತೊಗಲು ಗೊಂಬೆಗಳನ್ನು ತೂಗಿಬಿಟ್ಟಿದ್ದಾರೆ. ಇದರೊಂದಿಗೆ ಕಂಚಿನಿಂದ ತಯಾರಿಸಿದ ದೀಪಗಳು ಹಾಗು ವಿವಿಧ ಆಕೃತಿಗಳನ್ನು ನೆಲದ ಮೇಲೆ ಜೋಡಿಸಿ ಇಡಲಾಗಿದೆ. ಪ್ರಖ್ಯಾತ ಪೋಲಿಶ್ ವರ್ಣಚಿತ್ರಕಾರ ಎಡ್ವರ್ಡ್ ಡುರ್ನಿಕ್ ರಚಿಸಿರುವ ಮಾರ್ತಾರವರ ತಂದೆಯ ತೈಲವರ್ಣದ ಭಾವಚಿತ್ರ ಹಾಗು ಇನ್ನು ಕೆಲವು ಪೋಲೆಂಡಿನ ಕಲಾವಿದರ ಕಲಾಕೃತಿಗಳನ್ನು ಇಲ್ಲಿ ಕಾಣಬಹುದು. ಇದರ ಹೊರತಾಗಿ ಅವರ ಮಗ ರವಿ ಷಾ ರಚಿಸಿರುವ ಮರದ ಕೆತ್ತನೆಯ ಶಿಲ್ಪಗಳನ್ನೂ ಕಾಣಬಹುದು. ಇವರ ಮಗ ರವಿ ಷಾ ಶಿಲ್ಪಕಾರರಾಗಿದ್ದು ತಮ್ಮ ಶಿಲ್ಪಗಳನ್ನು ರಚಿಸಲು ಉಳಿಯ ಬದಲಾಗಿ ಕೊಡಲಿಯನ್ನು ಉಪಯೋಗಸುವುದರಿಂದ ತಮ್ಮ ವಿಶಿಷ್ಟ ತಂತ್ರಕ್ಕಾಗಿ 'ಆಕ್ಸ್ ರವಿ' ಎಂದೇ ಕರೆಯಲ್ಪಟ್ಟಿದ್ದಾರೆ. ಇದರ ಹೊರತಾಗಿ ಮಾರ್ತಾರವರಿಗೆ ಹೂದೋಟ ನಿರ್ಮಿಸುವುದರಲ್ಲಿ ವಿಶೇಷ ಆಸಕ್ತಿ ಇದೆ ಅದರಲ್ಲೂ ವಿವಿಧ ಜಾತಿಯ ಆರ್ಕಿಡ್‌ಗಳನ್ನು ಬೆಳೆಸುವುದೆಂದರೆ ಅವರಿಗೆ ಬಹಳ ಪ್ರಿಯವಾದದ್ದು.

ಅವರು ಇಲ್ಲಿಯವರೆಗೆ ತಮ್ಮನ್ನು ತೊಡಗಿಸಿಕೊಂಡಿರುವ ಕೆಲಸಕ್ಕೆ ಸ್ವಾಭಿಮಾನ ಹಾಗು ಆತ್ಮ ಗೌರವ ನಿರ್ದಿಷ್ಟವಾದ ಗುಣ ಲಕ್ಷಣವನ್ನು ನೀಡಿದೆ. ಅವರ ಬರವಣಿಗೆಗಳಲ್ಲಿ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಮತ್ತು ಅವರ ವಿಚಾರಗಳಿಗೆ ಬದ್ಧವಾವಿರಲು ತಮ್ಮನ್ನು ತಾವು ಎಲ್ಲಾ ರೀತಿಯ ಬಾಧ್ಯತೆಗಳಿಂದ ತಮ್ಮನ್ನು ತಾವು ಮುಕ್ತವಾಗಿರಿಸಿಕೊಂಡು ತಮ್ಮ ನೈತಿಕತೆ ಹಾಗು ಬರವಣಿಗೆಗೆ ಪ್ರಾಮಾಣಿಕವಾಗಿದ್ದಾರೆ.

ಪ್ರಶಸ್ತಿಗಳು:

ಕೇಂದ್ರ ಲಲಿತಕಲಾ ಅಕಾಡೆಮಿಯು ಅವರಿಗೆ 'ವರ್ಷದ ವಿಮರ್ಶಕ'ರೆಂಬ ಪ್ರಶಸ್ತಿಯನ್ನು ನೀಡಿದ್ದರೆ, 'ಸಮೀಕ್ಷ ಕಲೆ ಸಂಶೋಧನೆ ಮಾಧ್ಯಮದವರು ಇವರಿಗೆ ೨೦೧೬ರಲ್ಲಿ ಕಲಾ ಬರವಣಿಗೆಯ ಕ್ಷೇತ್ರದಲ್ಲಿನ ಇವರ ಜೀವಮಾನದ ಸಾಧನೆಗೆ ಡಾ. ವೀಣಾ ಶೇಖರ್ ಪ್ರಶಸ್ತಿಯನ್ನು ನೀಡಿದರು. ಕರ್ನಾಟಕ ಲಲಿತಕಲಾ ಅಕಾಡೆಮಿಯು ೨೦೧೬ರಲ್ಲಿ ಇವರ ಜೀವಿತಾವಧಿಯ ಸಾಧನೆಗಾಗಿ ಗೌರವ ಪ್ರಶಸ್ತಿಯನ್ನು ನೀಡಿ ಸಮ್ಮಾನಿಸಿತು.

೧) ಮಿತಾಲಜಿಯ ಇಂಡಿಕಾ, ೧೯೮೨, ISBN: 83-22-0176-7
೨) ಮೆಟಾಮೋರ್ಫೋಸಿಸ್ ಆಫ್ ಇಂಡಿಯನ್ ಗಾಡ್ಸ್, ಸೀಗಲ್ ಪಬ್ಲಿಕೇಶನ್, ೧೯೮೮, ISBN-10: 870460298, ISBN-13: 978-8170460299.

Marta Jakimowicz

Polish writer Marta Jakimowicz studied Indology from Warsaw University,moved to India in the year 1973 and continued to live here pursuing her writing and engagement with the art community within the country. She has lived in Bangalore for more than three decades, establishing herself as an art writer - working as art critic for newspapers, writing about Indian art/artists in the form of exhibition catalogues, artist monographs and articles for various publications and importantly as a curator of contemporary art. Marta is a bi-lingual writer who has published books in Polish language as well as in English.

Introduction

Marta Jakimowicz was born in Warsaw, Poland in 1948. She was born to Polish parents Andrzej and Irena Jakimowicz, who were both Art Historians and have contributed significantly to Polish art scene through their works. Her mother,Irena Jakimowicz was the curator for the Graphics and Contemporary drawing section at the National Museum in Warsaw,where she worked for nearly 46 years. While being the in charge of this section, she was responsible for curating several monographic exhibitions of Expressionist and Fauvist painters of Poland. Irena's prominent curated exhibition '*Five Centuries of Polish Graphic Art*'(1997) was a narrative of the history of printmaking in Poland. This exhibition was accompanied with the publication of an elaborate book and has been considered as the first text book on Graphic Art in Poland.

Andrzej Jakimowicz was an important academician for arts in the country. While he was still pursuing his studies in arts, he became a part of the resistance movement in Poland during World War II and started illustrating for their magazines and leaflets. He was also designing linocut book covers for notable Polish poets and writers. It is only post- war that he went on to study Art Historywhich was followed by a teaching career at the University as a Professor.He was specialised in 19th and 20th century Polish Art as well as with Art of Asia. Being a prolific writer, he published several articles related to Contemporary Polish Art as well as about art from the East.A crucial moment for Andrzej came when he was delegated to India in the early 1956 as the commissioner of the Polish Art Exhibition in Delhi. From then on, he developed a keen interest in Indian Art brought which him back to India with several more exhibitions; and also with his own interest toexplore in detail about pre-independence Indian Art. Several visits and constant research about specific issues in Indian, Art and Oriental Art/Art of the East led him to publish books like *Art of India* (1972) *Art of Indonesia*, *The West and the Art of East* and so on. He was at the peak of his career when a paralytic attack shunned his participation inacademic activity. But the fervour to work was so strong in him that his illness did not stop him from making a series of subtle pencil and crayon drawings in his left hand and as well as have two exhibitions of the works that were produced in this period.

Whenever Andrzej travelled to India for organizing exhibitions, on his way back home,he carried little artefacts as memorabilia.This, Marta recalls as ‘experiences’ of India through objects that he brought and that which carried the ‘smell’ and ‘colour’ of a culture. She was drawn to these objects for their tactile nature which often was missing from the rarefied, mass produced objects of Europe.

Unlike her parents, Marta only informally studied art history. Her interests were beyond regular subjects like philosophy, medicine etc. The liking developed towards India in her childhood coupled with her own interest towards understanding new cultures possibly urged Marta to take up Indology at the Warsaw University. Indology is study of Indian Culture and the subject involves studying Indian languages amongst which Sanskrit was a priority (in which she was very well versed); and apart from it were other languages which could be learnt like Hindustani and south Indian languages. While she was pursuing her studies, there were no experts at the University who could teach south Indian languages and was hence advised by her professor at the university to come to India to learn these languages (especially Kannada) so that she could go back later to teach them at the university.

Subjects like Indology arises out of the Europe's interest in a land which contained a multitude of cultures, languages and ideas spread over a vast geography which was a by product of their exploration for business.The East occupied an important place in the Western imagination for a very long time, but predominantly from the 1600's. The era of colonization and the growing interest combined with curiosity about Asian countries produced appealing outcomes. It brought many scholars from various fields to arrive here and interpret the Indian subjectivity. The materialistic Western culture sought the East in its quest for spiritual contentment.Many scholars in the past have found the Indian subjectivity engaging. Art historians like Stella Kramarisch researched, taught and also worked extensively on the Indian Art History. She was so much in love with Indian philosophy that she is said to have converted herself into a Hindu!

Marta'sfinal thesis for her graduation originated from her interest in Indian mythology, iconography and figurative tradition. The thesis titled '*Metamorphoses of Indian Gods*'was based on a set of 105 mythological paintings in traditional style that were painted in thesouth-eastern part of the present day Andhra region. These paintings had travelled from India through the French and found their way into the library of Polish King. The series of these pictures are used to interpret iconographical representations of Indian gods and goddesses.The painting style adopted seems like a coalescence of Kalamkari with Tanjore painting. These paintings follow scheme of traditional painting for the figures and the Kalamkari's style of colour treatment with use of flat, deep earthly colours all constricted within soot black outline. Through this research, she retraces the colonial backdrop against which these paintings were produced and their subsequent travel to France along with the French, after their defeat in the Indian peninsular region. This thesis was first published in Polish in 1983 and later improvised and published in English in1988.

Writing:

